# ಅಪರಂಜಿ

**ತಿಳಿನಗೆಯ ಕಾರಂಜಿ** **ನವೆಂಬರ್ 2018**




ಬಿಡಿ ಪ್ರತಿ: ರೂ.10.00

ಸಂಪಾದಕ ಮಂಡಳಿ

ಸಂಪಾದಕರು

ಶ್ರೀ ಎಂ. ಶಿವಕುಮಾರ್

ಉಪ ಸಂಪಾದಕರು

ಶ್ರೀ ಬೇಲೂರು ರಾಮಮೂರ್ತಿ

ಸದಸ್ಯರು

ಶ್ರೀ ಎಚ್.ಎನ್. ಆನಂದ

ಶ್ರೀ ಎಚ್. ಗೋಪಾಲಕೃಷ್ಣ

ಆಡಳಿತ ಮಂಡಳಿ

ಮ್ಯಾನೇಜಿಂಗ್ ಟ್ರಸ್ಟಿ

ಶ್ರೀ ಉಲ್ಲಾಸ ರಾಯಸಂ

ಟ್ರಸ್ಟಿಗಳು

ಶ್ರೀ ಎಂ ಶಿವಕುಮಾರ್

ಶ್ರೀ ಬೇಲೂರು ರಾಮಮೂರ್ತಿ

ಶ್ರೀ ವಿ.ಆರ್. ನಾಥ್

ಶ್ರೀ ಎಚ್.ಎನ್. ಆನಂದ

ಶ್ರೀ ಸಿ.ಆರ್. ಸತ್ಯ

ಶ್ರೀ ಕೆ. ರವೀಂದ್ರ ರಾವ್

**ಚಂದಾ ವಿವರ:**

**ಬಿಡಿ ಪ್ರತಿ: ರೂ. 10/-**

**ವಾರ್ಷಿಕ ಚಂದಾ: ರೂ. 100/-**

**ಹತ್ತು ವರ್ಷದ ಚಂದಾ: ರೂ. 750-**

ಸಂಪರ್ಕ ಸಮಯ:

ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ

ಚಂದಾ ಹಣದ ಚೆಕ್/ಡ್ರಾಫ್ಟ್‌ಗಳನ್ನು ಕೊರವಂಜಿ ಅಪರಂಜಿ ಟ್ರಸ್ಟ್ ಹೆಸರಿಗೆ ನಮೂದಿಸಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸಿ:

ಮನಿ ಆರ್ಡರ್ ಸ್ವೀಕರಿಸಲಾಗುವುದಿಲ್ಲ.



# ಅಪರಂಜಿ

ತಿಳಿನಗೆಯ ಕಾರಂಜಿ

**ಸಂಪುಟ 36**

**ಸಂಚಿಕೆ – 02**

**ನವೆಂಬರ್ – 2018**

## ಈ ಸಂಚಿಕೆಯಲ್ಲಿ.....


| | | |
|---|---|---|
| ಅಪರಂಜಿ ಕಿಡಿ | ಪ್ರಕಾಶ್ | 2 |
| ಶೇಖರ ಗುರೇರಾ | ಶಿವಕುಮಾರ್ | 3 |
| ಸಮಾಜ ಸೇವೆಯ ಸಾರ್ಥಕತೆ | ರಘುನಂದನ | 6 |
| ಸಾಕಮ್ಮನ ಶುಗರ್ ಲೆವೆಲ್ | ಸಿ.ಕೆ. ರೇಣುಕಾರ್ಯ | 9 |
| ಗೊರೂರರ ತಿಳಿಹಾಸ್ಯ | ಸುಕೇಶವ | 14 |
| ದೇವರ ಪ್ರಸಾದ | ಇ.ಆರ್. ರಾಮಚಂದ್ರನ್ | 20 |
| ತುಂತುರು | ದಂನಅ | 23 |
| ಹೀಗೊಂದು ಮದುವೆ | ಗಣೇಶ ಹೆಗ್ಗಡೆ | 24 |
| ಹಾರ ಹಾಕಿಸಿಕೊಂಡವರು | ಗುಂಡುರಾವ್ ದೇಸಾಯಿ | 29 |
| ಸಾಹಿತ್ಯ ಸಂಭ್ರಮ | ಜಿ.ವಿ. ನಿರ್ಮಲ | 31 |
| ವಾಡಿಕೆಗಳ ಸುಳಿಯಲ್ಲಿ | ಕುಮುದ ಪುರುಷೋತ್ತಮ್ | 37 |


**ಮುಖಪುಟ ವ್ಯಂಗ್ಯಚಿತ್ರ – ಶಿವು**

ಪ್ರಕಾಶಕರು: ಕೊರವಂಜಿ ಅಪರಂಜಿ ಟ್ರಸ್ಟ್, 36, 6ನೇ ಮುಖ್ಯರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560 003. email: koravanji42@hotmail.com ದೂರವಾಣಿ: 080-23345259

ಸಂಪರ್ಕ ವಿಳಾಸ: **ಶ್ರೀ ಬೇಲೂರು ರಾಮಮೂರ್ತಿ**, ಉಪ ಸಂಪಾದಕರು, ಅಪರಂಜಿ ಮಾಸಪತ್ರಿಕೆ, ನಂ. 96, 'ಸುಕೇಶವ' ಎರಡನೇ ಅಡ್ಡರಸ್ತೆ, 20ನೇ ಮುಖ್ಯರಸ್ತೆ, ಮೊದಲನೇ ಫೇಸ್, ಬಿ.ಟಿ.ಎಂ. ಲೇಔಟ್, ಬೆಂಗಳೂರು – 560 068. ದೂರವಾಣಿ: 080–26688488. email: belururamamurthy@gmail.com

*ಮುದ್ರಣ: ರವಿ ಗ್ರಾಫಿಕ್ಸ್ – ಅಕ್ಷರ ಜೋಡಣೆ: ಒಮೇಗಾ ಲೇಸರ್‌ಟೆಕ್*

# ಅಪರಂಜಿ ಕಿಡಿ

● ಪ್ರಕಾಶ್



ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಲಿ
ಅಧ್ಯಕ್ಷರ ನಿವಾಸದ ಭರ್ಜರಿ ರೇಯ್ಡ್ ! –ಸುದ್ದಿ

**ಅವರ 'ಕೈ' ಗಾರಿಕೆ ಏನು ಎಂಬುದು ಅರ್ಥವಾಯಿತು. !!**

★★★

ರಾಮ ಮಂದಿರಕ್ಕೆ ನಿರಂತರ ಒತ್ತಡ – ಸಂತರು

**ರಾಮ ! ರಾಮ !**

★★★

ಬೆಳ್ಳಿ ತಟ್ಟೆ ರಾಜಕಾರಣ ಬೇಕಾಗಿತ್ತೆ? –ಪತ್ರ

**ಶಿವ, ಶಿವಾ !!**

★★★

ಜಾರಕಿಹೊಳಿ ಪಟ್ಟು : 'ಕೈ' ಗೆ ಇಕ್ಕಟ್ಟು – ಪತ್ರಿಕೆ

**ಆಹಾ, ಶೀರ್ಷಿಕೆ ಎಂದರೆ ಹೀಗಿರಬೇಕು !!**

★★★

ಮೆಟ್ರೋ ಕಾಮಗಾರಿಗೆ ಆಮೆ ವೇಗ – ಸುದ್ದಿ

**ಆಮೆಗಳು ನಕ್ಕವಂತೆ !!**

★★★

ರಫೇಲ್ ಖರೀದಿ ಅನಿವಾರ್ಯವಾಗಿತ್ತು. – ಸುದ್ದಿ

**ಓಹೋ ಇದಿನ್ನೂ ಹೊಗೆಯಾಡುತ್ತಿದೆ !!**

★★★

ನೊಬೆಲ್ ಶಾಂತಿ ಪ್ರಶಸ್ತಿಗೆ ಟ್ರಂಪ್, ಕಿಂ, ಮೂನ್ ??? – ಪತ್ರಿಕೆ

**ನೊಬೆಲ್‌ನ ಆತ್ಮ ಮಮ್ಮಲ ಮರುಗಿತಂತೆ !!**

★★★

# ಶೇಖರ್ ಗುರೇರಾ

**- ಶಿವಕುಮಾರ್**



ಶೇಖರ್ ಗುರೇರಾ (ಪೂರ್ಣ ನಾಮಧೇಯ- ಚಂದ್ರಶೇಖರ್ ಗುರೇರಾ) ಅವರು ಒಬ್ಬ ಖ್ಯಾತ ವ್ಯಂಗ್ಯಚಿತ್ರಕಾರರಷ್ಟೇ ಅಲ್ಲ, ಗ್ರಾಫಿಕ್ ಡಿಸೈನಿಂಗ್ ಕ್ಷೇತ್ರದಲ್ಲೂ ಮುಂಚೂಣಿಯಲ್ಲಿದ್ದಾರೆ. ಪಂಜಾಬಿನ ಮೋಗಾದಲ್ಲಿ 1965ರಲ್ಲಿ ಇವರ ಜನನ. ಅಭೋರ್ನಲ್ಲಿನ ಡಾವ್ ಕಾಲೇಜಿನಲ್ಲಿ ಪ್ರಿ ಯೂನಿವರ್ಸಿಟಿ ಮುಗಿಸಿ, ಪಾಟಿಯಾಲಾದಲ್ಲಿನ ಮುಲಾತಿನೀ ಮೋದಿ ಕಾಲೇಜಿನಿಂದ ಗುರೇರಾ ವಿಜ್ಞಾನ ಪದವೀಧರರಾದರು. ಅನಂತರ ಇವರು ದೆಹಲಿಯಲ್ಲಿನ ಅಪ್ಲೈಡ್ ಆರ್ಟ್ಸ್ ಕಾಲೇಜಿನಿಂದ ಆರ್ಟ್ ಪದವಿಯನ್ನು ಗಳಿಸಿದರು.

1973ರಲ್ಲಿ ಇವರ ಮೊದಲ ವ್ಯಂಗ್ಯಚಿತ್ರ ಪಂಜಾಬಿನ ಹಿಂದಿ ದೈನಿಕ ವೀರ್ ಪ್ರತಾಪ್ ನಲ್ಲಿ ಬೆಳಕು ಕಂಡಿತು. ಪಂಜಾಬ್ ಕೇಸರಿ, ಹಿಂದ್ ಸಮಾಚಾರ್, ಜಗ್ ಬನಿ, ನವ ಭಾರತ್, ಸೆಂಟ್ರಲ್ ಕ್ರಾನಿಕಲ್ ಮತ್ತು ಪಯೋನೀರ್ ಪತ್ರಿಕೆಗಳಲ್ಲಿ ಇವರ ವ್ಯಂಗ್ಯ ಚಿತ್ರಗಳು ನಿರಂತರವಾಗಿ ಮೂಡಿಬರುತ್ತಿವೆ. 1984 ರಲ್ಲಿ ಇವರು ಫ್ರೀಲಾನ್ಸ್ ಚಿತ್ರರಚನೆಯನ್ನು ಕೈಗೊಂಡಿದ್ದಾರೆ.

1999ರಲ್ಲಿ ಶೇಖರ್ ಕಾರ್ಗಿಲ್ ವ್ಯಂಗ್ಯಚಿತ್ರಗಳ ಸರಣಿಯನ್ನೇ ಸೃಷ್ಟಿಸಿದರು. ಭಾರತೀಯ ಯೋಧರು ಕಾರ್ಗಿಲ್‌ಗೆ ಹೋಗುವ ದಾರಿಯಲ್ಲಿ ನವದೆಹಲಿ ರೇಲ್ವೇ ಸ್ಟೇಷನನ್ನು ಹಾದು ಹೋಗುವಾಗ ಶೇಖರ್ ಅಲ್ಲಿ ನಿಂತು ಯೋಧರ ಮುಂದೆಯೇ ತಮ್ಮ ವ್ಯಂಗ್ಯಚಿತ್ರಗಳನ್ನು ರಚಿಸಿದರು. ಈ ಚಿತ್ರಗಳು ಅನಂತರ ದೆಹಲಿಯ ಲಲಿತ್ ಕಲಾ ಅಕಾಡೆಮಿಯಲ್ಲಿ ಪ್ರದರ್ಶಿತವಾಗಿದ್ದೇ ಅಲ್ಲದೆ, ಜೈಪುರ್, ಪಾಟಾ, ಚಂಡೀಘರ್ ಮತ್ತು ಇಂದೋರ್ ಗಳಲ್ಲಿ ಪ್ರದರ್ಶಿತಗೊಂಡವು.


ಶೇಖರ್ ತಮ್ಮ ವೃತ್ತಿ ಜೀವನದಲ್ಲಿ ಅನೇಕ ಪ್ರಶಸ್ತಿಗಳನ್ನು ಪಾರಿತೋಷಕಗಳನ್ನು ಗಳಿಸಿದ್ದಾರೆ. ಇಲ್ಲಿ ಹಲವು ಪ್ರಮುಖ ಪ್ರಶಸ್ತಿಗಳ ವಿವರಗಳನ್ನು ಕಾಣಬಹುದು. 1992ರಲ್ಲಿ ಮೊದಲ ಜಗಜೀವನ್ ರಾಮ್ ಮೆಮೋರಿಯಲ್ ಅಖಿಲ ಭಾರತ ಕಲಾ ಪ್ರದರ್ಶನದಲ್ಲಿ ಬೆಸ್ಟ್ ಕಾರ್ಟೂನಿಸ್ಟ್ ಪ್ರಶಸ್ತಿ, 1997ರಲ್ಲಿ ಜಪಾನಿನಲ್ಲಿ ನಡೆದ ಏಷ್ಯಾ ಕಲಾ ಪ್ರದರ್ಶನದಲ್ಲಿ ಭಾರತದ ಪ್ರತಿನಿಧಿ, 2011 ರಲ್ಲಿ ಮದನ್ ಮೋಹನ್ ಮಾಳವೀಯಾ ಸ್ಮರಣಾರ್ಥ ವಾರ್ಷಿಕ ಪ್ರಶಸ್ತಿ (ಅತ್ಯುತ್ತಮ ಪತ್ರಕರ್ತ). ಗುರೇರಾ ರಚಿಸಿರುವ ಹಲವು ಚಿತ್ರಗಳನ್ನು ಮುಂದಿನ ಪುಟಗಳಲ್ಲಿ ನೀಡಿದೆ.





ಆಫೀಸ್ ಆಫ್ ಪ್ರಾಫಿಟ್ ಮಸೂದೆಗೆ ಲೋಕಸಭೆಯಲ್ಲಿ ಜಯ




ಏನೂ ಪರವಾಗಿಲ್ಲ ಬಿಡಿ
ನಾವೇ ಸ್ಪಾನ್ಸರ್ ನ ಕೊಳ್ಳಬಹುದು ಈಗ




ಇಂಡಿಯ
ಅಮೆರಿಕ
ಟಾಲಿಬಾನ್


ಬುಷ್ ಕಾಶ್ಮೀರದಲ್ಲಿನಂತೆ ನಮ್ಮ
ಆಂತರಿಕ ವಿಷಯದಲ್ಲಿ ಕೈ ಹಾಕಬಹುದು
ಎಂಬ ಆಶೆ............


ಪೆಟ್ರೋಲ್
ಬೆಲೆ
ಬಡ್ಡಿ ದರ

# ಸಮಾಜ ಸೇವೆಯ ಸಾರ್ಥಕತೆ

**- ರಘುನಂದನ**

ನಾನಿರುವುದು ಗೋವಾ ರಾಜ್ಯದ ಒಂದು ಒಂದು ಸಣ್ಣ ಪಟ್ಟಣದಲ್ಲಿ. ಪಟ್ಟಣ ಸಣ್ಣದಾದರೂ ಅವ್ಯವಸ್ಥೆಯಲ್ಲಿ ನಾವು ಯಾವುದೇ ದೊಡ್ಡ ಶಹರಕ್ಕೇನೂ ಕಡಿಮೆಯಿಲ್ಲ. ಪರಿಸರಮಾಲಿನ್ಯ, ವಾಹನ ದಟ್ಟಣೆ, ಚೆಲ್ಲಾಡಿರುವ ಕಸ ಇವುಗಳು ಮತ್ತು ಇವುಗಳ ಬಗೆಗೆ ಆಳುವವರ, ಆಳಿಸಿಕೊಳ್ಳುವವರ ದುರ್ಲಕ್ಷ್ಯ, ಅವೂ ಸಹ ದೇಶದಲ್ಲೆಲ್ಲಕಡೆ ಇರುವಂತೆಯೇ ಸಹಜವಾಗಿ ನಮ್ಮಲ್ಲೂ ಇದೆ. ನಮ್ಮ ಜನಗಳಿಗೆ ಈಗ ಈ ರೀತಿಯ ಅವ್ಯವಸ್ಥೆಯೇ ವ್ಯವಸ್ಥೆಯಾಗಿ ಹೋಗಿ ಎಲ್ಲರೂ ಅದಕ್ಕೇ ಹೊಂದಿಕೊಂಡು ಬಿಟ್ಟಿದ್ದಾರೆ ಎನಿಸುತ್ತಿದೆ. ಹಾಗೆ ಆ ರೀತಿಯ ಅವ್ಯವಸ್ಥೆಗೆ ಸಹಜವಾಗಿ ಹೊಂದಿಕೊಳ್ಳಲು ಸಾಧ್ಯವಿಲ್ಲದ ನನ್ನಂಥ ಕೆಲವು ಜನರಿಗೆ ಏನಾದರೂ ಮಾಡಿ ಪರಿಸ್ಥಿತಿಯನ್ನು ಸರಿಪಡಿಸಬೇಕೆಂಬ ಭ್ರಮೆ. ಆದ್ದರಿಂದ ನಾವು ಕೆಲವರು ಒಂದು ಗುಂಪು ಕಟ್ಟಿಕೊಂಡು, ಅದನ್ನು ಸುಧಾರಿಸುವ ಪ್ರಯತ್ನ ಮಾಡುತ್ತಿರುತ್ತೇವೆ. ನಮ್ಮ ಸಮಾಜಸೇವೆಗೆ ನಮ್ಮೂರಿನ ಪ್ರಜೆಗಳ ಸಹಕಾರವೂ ಇಲ್ಲ, ನಮ್ಮನ್ನು ಆಳುವವರ ಬೆಂಬಲವೂ ಇಲ್ಲ. ಗಾಳಿಗುದ್ದಿ ಮೈನೋಯಿಸಿಕೊಳ್ಳುವ ಕೆಲಸ.

ನಾವು ಹತ್ತು ಹದಿನೈದು ಜನ ವಾರಕ್ಕೊಮ್ಮೆ ಭೇಟಿಯಾಗಿ ಅದೂ ಇದೂ ಮಾತನಾಡಿ ಸಮಾಜಕ್ಕೆ ಒಳಿತೆನ್ನಿಸುವ ಏನಾದರೊಂದು ಕಾರ್ಯಕ್ರಮವನ್ನು ಏರ್ಪಡಿಸಿಕೊಂಡು ಒದ್ದಾಡುತ್ತೇವೆ. ನಮ್ಮ ಪ್ರಧಾನ ಮಂತ್ರಿಗಳು ಹೊಸದಾಗಿ ಅಧಿಕಾರಕ್ಕೆ ಬಂದು ಹುರುಪಿನಿಂದ ನಮ್ಮ ದೇಶವನ್ನು ಸ್ವಚ್ಛಗೊಳಿಸಲು ಹೊರಟಾಗ ನಾವೂ ನಮ್ಮ ಊರನ್ನು ಅಮರಾವತಿಯನ್ನಾಗಿಸುವ ಭ್ರಮೆಹೊತ್ತು ಕಾರ್ಯನಿರತವಾದೆವು.

ಮನೆಮನೆಗೆ ಹೋಗಿ, ಅಕ್ಕಪಕ್ಕದಲ್ಲಿ, ರಸ್ತೆಯಲ್ಲಿ, ಕಸ ಚೆಲ್ಲಬೇಡಿರೆಂದು ಕೈಮುಗಿದು ಹೇಳಿ ಬಂದೆವು. ಹೋಟೆಲು ಅಂಗಡಿಗಳ ಮಾಲೀಕರನ್ನು ಭೇಟಿಯಾಗಿ ತಮ್ಮ ತಮ್ಮಲ್ಲಿ ದಿನವಹಿ ತಯಾರಾಗುವ ಕಸವನ್ನು ಪಕ್ಕದ ಚರಂಡಿಗೆ ಚೆಲ್ಲದೇ ಇಟ್ಟಿದ್ದು, ಮುನಿಸಿಪಾಲಿಟಿ ಗಾಡಿ ಬಂದಾಗ ಅವರಿಗೆ ಕೊಡಿರೆಂದು ಹೇಳಿದೆವು. ಶಾಲೆಗಳಿಗೆ ಹೋಗಿ ಮಕ್ಕಳಿಗೆ ಬುದ್ಧಿ ಮಾತು ಹೇಳಿದೆವು. ಮುನಿಸಿಪಾಲಿಟಿ ಚೇರ್ಮನ್ನರನ್ನು ಭೇಟಿಯಾಗಿ ಮನೆಗಳಿಂದ, ಅಂಗಡಿ ಮುಂಗಟ್ಟುಗಳಿಂದ ವ್ಯವಸ್ಥಿತವಾಗಿ ಕಸ ಸಂಗ್ರಹಿಸುವ ಏರ್ಪಾಟು ಮಾಡಿರೆಂದು ಕೇಳಿಕೊಂಡೆವು.

ಇದರಿಂದ ಆದದ್ದೊಂದೇ. ಏನು ಗೊತ್ತೇ? ನಮ್ಮ ಗುಂಪಿಗೆ ಜನರ ಮಾತಿನಲ್ಲಿ ಕಚಡಾ ಕಮಿಟಿ ಎಂದು ಹೆಸರಾಯಿತು. ಅಷ್ಟೇ. ಆದರೂ ನಮ್ಮ ಭ್ರಮೆ ತೀರಲಿಲ್ಲ. ಹೇಳಿ ತೋರಿಸುವುದಕ್ಕಿಂತ ಮಾಡಿ ತೋರಿಸುವುದು ಉತ್ತಮವೆಂದು ನಮ್ಮಲ್ಲಿ ಕೆಲವರು ಅಭಿಪ್ರಾಯ ಪಟ್ಟರು. ಅದನ್ನೊಪ್ಪಿ, ಪ್ರತಿ ಭಾನುವಾರ ಬೆಳಗ್ಗೆ ಎರಡು ಘಂಟೆಕಾಲ ನಮ್ಮ ಊರಿನ ಕಸತುಂಬಿರುವ ಭಾಗವೊಂದನ್ನು ಗುರುತಿಸಿ, ಅದನ್ನು ಸ್ವಚ್ಛ ಗೊಳಿಸುವ ಕಾರ್ಯಕ್ರಮ ಒಂದನ್ನು ಒಮ್ಮತದಿಂದ ಒಲಿದು ಹಚ್ಚಿಕೊಂಡೆವು.

ಮುನಿಸಿಪಾಲಿಟಿ ಇಂಜಿನಿಯರನ ಕೃಪೆಯಿಂದ ಪರಕೆ, ಗುದ್ದಲಿ, ಪಿಕಾಸಿ, ಬಾಂಡ್ಲೆ, ಕಸದ ಚೀಲಗಳು ಮುಂತಾದವುಗಳನ್ನು ಸಾಲ ಪಡೆದೆವು. ಊರಿನಲ್ಲಿ ಕಸದ ಕುಪ್ಪೆಗಳೆಂದು ಹೆಸರಾಗಿ ವರ್ಷಗಟ್ಟಲೆಯಿಂದ ಕಸತುಂಬಿಕೊಂಡು ಅಕ್ಕಪಕ್ಕದ ಜಾಗವನ್ನೆಲ್ಲ ಆಕ್ರಮಿಸಿಕೊಳ್ಳುತ್ತಿದ್ದ ಹಲವಾರು ಜಾಗಗಳನ್ನು ಗುರುತಿಸಿಕೊಂಡೆವು. ನಮ್ಮ ಮೂಗಿಗೆ ಬಟ್ಟೆ ಕಟ್ಟಿಕೊಂಡು, ಕೈಗೆ

ಗವಸುಗಳನ್ನು ತೊಟ್ಟುಕೊಂಡು ಮೂರ್ನಾಲ್ಕು ತಿಂಗಳುಗಳ ಕಾಲ ಪ್ರತಿ ಭಾನುವಾರ ಬೆಳಗ್ಗೆ ದುರ್ನಾತವನ್ನು ಸೇವಿಸಿ ಆನಂದಿಸುತ್ತಾ ಕಸದ ರಾಶಿಗಳನ್ನು ಅಗೆದು, ಬಗೆದು, ಗುಡಿಸಿ ಸ್ವಚ್ಛ ಗೊಳಿಸಿದೆವು. ಫೈರ್ ಡಿಪಾರ್ಟ್ಮೆಂಟಿನವರನ್ನು ಓಲೈಸಿ ನಾವು ಸ್ವಚ್ಛಗೊಳಿಸಿದ ಜಾಗಗಳಿಗೆ ಅವರ ಲಾರಿ ತರಿಸಿ ತೊಳೆಸಿದವು. ಒಳ್ಳೆಯ ಕೆಲಸವಾಯಿತೆಂದು ನಮ್ಮ ಬೆನ್ನನ್ನು ನಾವೇ ತಟ್ಟಿಕೊಂಡೆವು. ನಾನು ಇದರ ಮುಂಚೂಣಿಯಲ್ಲಿದ್ದುದರಿಂದ ನನ್ನ ಬೆನ್ನಿಗೆ ಒಂದೆರಡು ಪೆಟ್ಟು ಜಾಸ್ತಿಯೇ ಬಿತ್ತು.

ನಾವು ಈ ರೀತಿ ಕೆಲಸಮಾಡುತ್ತಿದ್ದಾಗ ಸುತ್ತಮುತ್ತಲು ವಾಸಿಸುವ ಜನ ಒಂದು ಪಕ್ಕದಲ್ಲಿ ನಿಂತು ಚಪ್ಪಾಳೆ ತಟ್ಟಿದರು. ತಮ್ಮ ಮೊಬೈಲ್ ಫೋನ್‌ಗಳಲ್ಲಿ ಫೋಟೋ ಕ್ಲಿಕ್ಕಿಸಿಕೊಂಡರು. ಕಸಕ್ಕೆ ಬೆಂಕಿಹಾಕಲು ನಮ್ಮ ಬಳಿ ಬೆಂಕಿಪೆಟ್ಟಿಗೆ ಇಲ್ಲದಾಗ ನಮಗೆ ಬೆಂಕಿಪೊಟ್ಟಣ ಸಾಲಕೊಟ್ಟರು. ನಮ್ಮ ಕೆಲಸದಲ್ಲಿ ಕೈಹಾಕದೇ ಕೈಗಳನ್ನು ಸ್ವಚ್ಛವಾಗಿಟ್ಟುಕೊಂಡು ನಾವು ಕೆಲಸಮುಗಿಸಿ ವಾಪಾಸಾದಮೇಲೆ ಅದೇಜಾಗದಲ್ಲಿ ತಮ್ಮ ಮನೆಗಳ ಕಸ ತಂದು ಚೆಲ್ಲಿ ತಮ್ಮ ಮನೆಗಳನ್ನೂ ಸ್ವಚ್ಛವಾಗಿ ಉಳಿಸಿಕೊಂಡರು.

ನಾಲ್ಕು ತಿಂಗಳ ನಂತರ ನಾವು ದಣಿದು ನಮ್ಮ ಕೆಲಸಕ್ಕೆ ಮಂಗಳ ಹಾಡಿದೆವು. ಒಂದು ಭಾನುವಾರ ನಾನು ಬೆಳಗ್ಗೆ ಕಾಫಿ ಕುಡಿದು ಪೇಪರು ಓದುತ್ತಿದ್ದೆ. ಫೋನು ಹೊಡೆದುಕೊಂಡಿತು. ಕೈಗೆತ್ತಿಕೊಂಡೆ. ನನ್ನ ಫೋನ್ ನಂಬರಿಗೂ ಎಲೆಕ್ಟ್ರಿಸಿಟಿ ಡಿಪಾರ್ಟ್ಮೆಂಟಿನ ನಂಬರಿಗೂ ಒಂದು ಅಂಕಿ ಮಾತ್ರ ವ್ಯತ್ಯಾಸವಿರುವುದರಿಂದ ಅನೇಕಬಾರಿ ಊರಲ್ಲಿ ಎಲ್ಲೋ ಲೈಟಿಲ್ಲದಾದಾಗ ನನ್ನ ಲ್ಯಾಂಡ್ ಲೈನಿಗೆ ಕರೆಬರುತ್ತದೆ. ಆದರೆ ಇದು ಲೈಟಿಲ್ಲದ ಕರೆಯಾಗಿರಲಿಲ್ಲ.

ಆ ಕಡೆಯಿಂದ ದನಿ ಕೇಳಿತು.

'ನಮ್ಮ ರಸ್ತೆಯಲ್ಲಿ ಕಸ ಒಯ್ದು ಎರಡು ದಿನವಾಯಿತು, ಜತೆಗೆ ಒಂದು ನಾಯಿ ಸತ್ತು ವಾಸನೆ ಹೊಡೆಯುತ್ತಿದೆ.'

'ಅದನ್ನು ನನಗೇಕೆ ಹೇಳುತ್ತಿದ್ದೀರಿ ಸ್ವಾಮೀ?'

'ನಮ್ಮ ರಸ್ತೆಯಲ್ಲಿ ಇರುವವರಿಬ್ಬರು ಡಾಕ್ಟರರಿಗೆ ಫೋನ್ ಮಾಡಿ ಎಂದು ನಿಮ್ಮ ನಂಬರ್ ಕೊಟ್ಟರು.'

'ಇರಬಹುದು, ಆದರೆ ನಾನು ಪ್ರಾಣಿ ಡಾಕ್ಟರನಲ್ಲ, ದಂತವೈದ್ಯ. ಪ್ರಾಣಿ ವೈದ್ಯನಾದರೂ ಸಹ ಸತ್ತು ವಾಸನೆ ಹೊಡೆಯುತ್ತಿರುವ ನಾಯಿಗೆ ಏನು ಮಾಡಿಯಾರು?'

'ಹಾಗಲ್ಲಾ, ಅದನ್ನು ತೆಗೆದು ಹಾಕಬೇಕು.'

'ಅದನ್ನು ಮುನಿಸಿಪಾಲಿಟಿಗೆ ತಿಳಿಸಿರಿ.'

'ಮುನಿಸಿಪಾಲಿಟಿಗೆ ಹೇಳಿಯಾಯಿತು. ಯಾರೂ ಬಂದಿಲ್ಲ, ಅದಕ್ಕೇ ಡಾಕ್ಟರರಿಗೆ ಫೋನ್ ಮಾಡಿನೋಡಿ ಎಂದು ನಂಬರ ಕೊಟ್ಟಿದ್ದಾರೆ.'

'ಒಳ್ಳೆ ಕಥೆಯಾಯಿತಲ್ಲ! ಯಾವ ಡಾಕ್ಟರ ಎಂದು ಏನಾದರೂ ತಿಳಿಸಿದ್ದಾರೆಯೇ?''

'ನೀವೇ ಸಾರ. ಕಚಡಾ ಡಾಕ್ಟರರಿಗೆ ಫೋನ ಮಾಡಿ ನೋಡಿ ಎಂದರು. !!!'

ಇದು ನನ್ನ ಸಮಾಜಸೇವೆಯ ಕಥೆ. ಸಾಮಾನ್ಯ ನಾಗರಿಕನಾಗಿದ್ದವನು ನನ್ನ ಸಮಾಜ ಸೇವೆಯ ದೆಸೆಯಿಂದ ಕಚಡಾ ಸಂಘದ ಸದಸ್ಯನಾಗಿ ನಂತರ ಕಚಡಾ ಡಾಕ್ಟರನಾಗಿದ್ದೇನೆ. ಸಮಾಜಸೇವೆ ಸಾರ್ಥಕವಾಯಿತು!

DISTANCE EDUCATION

(Govt. & UGC Recognised Universities)

# BEECHI VIDYA KENDRA

ADMISSION OPEN - APPLY NOW

TEMPLE OF KNOWLEDGE

## CENTER OF DISTANCE LEARNING

**MBA WITH 6 SPECIALIZATIONS, MA, M.COM, MCA, MSc-BT, PGDCS, BA & B.COM - AGE BASIS**

Email : admin@beechi.in Web : www.becchi.in
Mob. 9035302302, 9035007003

## PLACEMENT SERVICES FOR :

- BFSI
- SOFTWARE
- MANUFACTURING
- AUTOMOBILES
- REAL ESTATE
- HOSPITALITY
- FMCG

TEMPLE OF KNOWLEDGE

Email : admin@beechi.in
Web : www.becchi.in
Mob. 9740968677

# ಸಾಕಮ್ಮನ 'ಶುಗರ್ ಲೆವೆಲ್'

**ಡಾ. ಸಿ.ಕೆ. ರೇಣುಕಾರ್ಯ**

ನಾನು ನನ್ನ **'ಡಯಾಬಿಟಾಲಜಿಸ್ಟ್'** ಮಿತ್ರರಾದ ಡಾ. ನಾರಾಯಣ್‌ರವರ ಕ್ಲಿನಿಕ್ಕಿನಲ್ಲಿ ಅವರೊಡನೆ ಮಾತನಾಡುತ್ತಾ ಕುಳಿತಿದ್ದೆ. ಅಲ್ಲಿಗೆ ಅವರ ಪೇಷೆಂಟ್ ಸಾಕಮ್ಮ ಅವಳ ಸ್ನೇಹಿತೆಯೊಡನೆ ತನ್ನ ರಿಪೋರ್ಟ್‌ಗಳೊಡನೆ ಬಂದಳು. ಸಾಕಮ್ಮ ಮೈಸೂರು ಸಮೀಪದ ಸಾತನಳ್ಳಿಯವಳು. ಅವಳ ಗಂಡ ತೋಟ – ಹೊಲವನ್ನು ಹೊಂದಿದ್ದು ಸಾಮಾನ್ಯವಾಗಿ ಅನುಕೂಲಸ್ಥ ಎಂದು ಡಾಕ್ಟರ್ ಮಿತ್ರರು ಹೇಳಿದರು. ಸಾಕಮ್ಮ ಮತ್ತು ಡಾಕ್ಟರರ ನಡುವಣ ಸಂಭಾಷಣೆಯನ್ನು ಕೆಳಗೆ ದಾಖಲಿಸುತ್ತಿದ್ದೇನೆ.

ಡಾಕ್ಟರ್ : ಹಿಂದಿನ ಬಾರಿ ಯಾವಾಗ ಬಂದಿದ್ದೆ ?

ಸಾಕಮ್ಮ : 4 ತಿಂಗಳ ಹಿಂದೆ ಬಂದು ಹೋದೆನಲ್ಲ. ನೀವೇ ರಿಪೋರ್ಟ್ ನೋಡಿ, ಇನ್ನು ಮುಂದೆ ಪಥ್ಯವಾಗಿರಬೇಕು, ಮಾತ್ರೆ ಕಾಲಕಾಲಕ್ಕೆ ತೆಗೆದುಕೊಳ್ಳಬೇಕು. ತೋಟದಲ್ಲೆ ಪ್ರತಿದಿನ ಓಡಾಡಬೇಕು ಎಂದು ಹೇಳಿದ್ದೀರಲ್ಲ.

ಡಾಕ್ಟರ್ : ಹಾ. ಹಾಗೆ ಮಾಡುತ್ತಿದ್ದೀ ತಾನೆ.

ಸಾಕಮ್ಮ : ಹೌದು. ತೋಟದ ಕೆಲ್ಸಾನೆ ಜಾಸ್ತಿ. ಒಂದೊಂದು ಸಾರಿ ಮಾತ್ರೆ ತೆಗೆದುಕೊಳ್ಳೋದು ಮರ್ತೋಯ್ತದೆ.

ಡಾಕ್ಟರ್ : ನಾನು ಹೇಳಿದ ಟೆಸ್ಟ್ ಎಲ್ಲಾ ನಮ್ಮ ಲ್ಯಾಬ್‌ನಲ್ಲಿ ಮಾಡಿಸಿಕೊಂಡು ಬಂದಿದೀ ತಾನೆ.

ಸಾಕಮ್ಮ : ಮಾಡಸ್ಕಂಡ್ ಬಂದೀವ್ನಿ. ತಗಳಿ ರಿಪೋರ್ಟ್

ಡಾ. ನಾರಾಯಣ್ ಶುಗರ್ ರಿಪೋರ್ಟ್ ನೋಡಿ ಸ್ವಲ್ಪ ಗಾಬರಿಯಾದಂತೆ ನನಗೆ ಕಂಡಿತು.

ಸಾಕಮ್ಮ : ಡಾಕ್ಟರೆ, ಲ್ಯಾಬ್ ನರಸಮ್ಮ ಶುಗರ್ ಸ್ವಲ್ಪ ಮೇಲಕ್ಕೇರೈತಿ ಅಂತಿದ್ಲು.

ಡಾಕ್ಟರ್ : ಸ್ವಲ್ಪ ಮೇಲಕ್ಕಲ್ಲ. ಆಕಾಶಕ್ಕೇರೈತೆ (ನನ್ನ ಕಡೆ ತಿರುಗಿ) ನೋಡಿ FBS 210, PPBS 310, ಇದೆ $HBA_1$, C 8.0 ಇದೆ (ಸಾಕಮ್ಮನ ಕಡೆ ತಿರುಗೀ) ನೀನು ಪಥ್ಯ ಮಾಡ್ತಾ ಇಲ್ಲ ಅಂತ ಕಾಣುತ್ತೆ. ಸ್ವೀಟ್ ಜಾಸ್ತಿ ತಿಂದ್ದಾಗಿದೆ.

ಸಾಕಮ್ಮ : ಏಯ್ ಇಲ್ಲ. ಉಗಾದಿ ಹಬ್ಬ ಅಂತ ಒಬ್ಬಟ್ಟು, ಪಾಯ್ಸ ಸ್ವಲ್ಪ ಜಾಸ್ತಿ ತಗಂಡೆ ಅಷ್ಟೇ.

ಡಾಕ್ಟರ್ : ಮತ್ತಿನ್ನೇನು ತೆಗೆದುಕೊಂಡಿದ್ದಿ. ಶುಗರ್ ಲೆವಲ್ ತುಂಬಾ ಜಾಸ್ತಿ ಇದೆ.

ಸಾಕಮ್ಮ : ಮತ್ತೇನೂ ಇಲ್ಲಪ್ಪ. ಉಗಾದಿ ತೊಡಕು ಅಂತ ಸ್ವಲ್ಪ ಜಾಸ್ತಿ ಮಾಂಸ ತಿಂದೆ ಅಷ್ಟೇ. ಮತ್ತೆ ನೀವೇ ಹೇಳಿದ್ದ ಹಾಗೆ ಹಣ್ಣುಗಳನ್ನು ತಿಂದೆ.

ಡಾಕ್ಟರ್ : ಏನೇನು ಹಣ್ಣು ?

ಸಾಕಮ್ಮ : ಏನಿಲ್ಲ ನಮ್ಮ ತೋಟದಲ್ಲೇ ಬೆಳೆಯೋ ಪಚ್ಚ ಬಾಳೆ, ಸಪೋಟ ಅಷ್ಟೇ. ನೀವೆ ಎಲ್ಲ ಹಣ್ಣು ತಿನ್ನಬಹುದು ಅಂತ ಹೇಳಿದ್ದರಿಂದ ನಾವು ತ್ವಾಟದಲ್ಲಿ ಬೆಳಿದೇ ಇರೋ, ಕಿತ್ತಲೆ, ಮೂಸಂಬಿ, ದ್ರಾಕ್ಷಿ, ನನ್ನ ಸೊಸೆ ಸಿಟಿಯಿಂದ ತಂದ್ಕೊಟ್ಟಿದ್ಲು ಅದ್ನೂ ತಿಂದಿದೀನಿ. (ಬಹುಶಃ ಅವಳ ಸೊಸೆಗೆ ಸಾಕಮ್ಮನನ್ನು ಸರ್ವನಾಶ ಮಾಡಬೇಕೆಂಬ ಉದ್ದೇಶವಿರಬೇಕು)

ಡಾಕ್ಟರ್ : ಅಲ್ಲಮ್ಮ, ನಾನು ಯಾವುದಾದರೂ ಒಂದು ಹಣ್ಣನ್ನು ತಿನ್ನಬೇಕೆಂದು ಹೇಳಿದ್ದೆನಲ್ಲವಾ. ಈಗ ನೋಡು, ಇದೆಲ್ಲದರಿಂದ ನಿನ್ನ ಶುಗರ್ ಲೆವೆಲ್ ಹೆಚ್ಚಾಗಿದೆ. ಹೀಗೆ ಮುಂದುವರಿದರೆ, ಮುಂದೆ ನಿನ್ನ ಹೃದಯ, ಕಿಡ್ನಿ ಎಲ್ಲದಕ್ಕೂ ಅಪಾಯವಾಗುತ್ತದೆ.

ಸಾಕಮ್ಮ : ಹಂಗ್ರಾ

ಡಾಕ್ಟರ್ : ಹೌದು. ಇನ್ನು ಮೇಲೆ ಮಾತ್ರೆ ನಿನಗೆ ಕೆಲಸ ಮಾಡುವುದಿಲ್ಲ. ದಿನಾ ಇಂಜೆಕ್ಷನ್ ತೆಗೆದುಕೊಳ್ಳಬೇಕು.

ಸಾಕಮ್ಮ : ಹಾ. ಇಂಜೆಕ್ಷನ್ನಾ, ಇಂಜೆಕ್ಷನ್ ಅಂದರೆ ನನಗೆ ಭಯ. ಬೇಕಾದರೆ ಎರಡು ಮಾತ್ರೆ ಜಾಸ್ತಿಯಾಗೆ ಕೊಟ್ಟು ಬಿಡಿ. ನಾನು ತಪ್ಪದೇ ತಗಾತೀನಿ.

ಡಾಕ್ಟರ್ : ಇಲ್ಲ ಹಾಗಾಗುವುದಿಲ್ಲ. ಮಾತ್ರೆ ಕಾಲ ಮುಗಿದಿದೆ. ಇಂಜೆಕ್ಷನ್ ತೆಗೆದುಕೊಳ್ಳಲೇಬೇಕು.

ಸಾಕಮ್ಮ : ನಮ್ಮ ಹಳ್ಳೀಲಿ ದಿನಾ ಇಂಜೆಕ್ಷನ್ ಹಾಕವ್ರು ಯಾರೂ ಇಲ್ವಲ್ಲ ?

ಡಾಕ್ಟರ್ : ಯಾರೂ ಬೇಕಾಗಿಲ್ಲ. ನೀನೇ ತೆಗೆದುಕೊಳ್ಳಬಹುದು. ಆದರೆ ಪ್ರತಿದಿನ ತಪ್ಪದೇ ತೆಗೆದುಕೊಳ್ಳಬೇಕು ಮತ್ತು ಪಥ್ಯವಾಗಿರಬೇಕು. ಈಗ ನಮ್ಮ ನರ್ಸ್ ಇಂಜೆಕ್ಷನ್ ಹೇಗೆ ತೆಗೆದುಕೊಳ್ಳಬೇಕು ಎನ್ನುವುದನ್ನು ತೋರಿಸುತ್ತಾರೆ. ನರ್ಸ್ ಕಡೆ ತಿರುಗಿ ಇವರಿಗೆ 'ಇನ್ಸುಲಿನ್' ತೆಗೆದುಕೊಳ್ಳುವುದನ್ನು ಹೇಳಿಕೊಡಿ.

ನರ್ಸ್ (ಸಾಕಮ್ಮನಿಗೆ): ನಿಮ್ಮ ರೆಟ್ಟೆ ತೋರಿಸಿ.

ನರ್ಸ್ ಸಾಕಮ್ಮನಿಗೆ ಇಂಜೆಕ್ಷನ್ ಕೊಡುತ್ತಿದ್ದಂತೆಯೇ, ಸಾಕಮ್ಮ ಗಾಬರಿಯಿಂದ ಹೆದರಿ ಕೆಳಗೆ ಬಿದ್ದೇ ಬಿಟ್ಟಳು.( ನರ್ಸ್ ಅವಳನ್ನು ಏಳಿಸಿ ಸಾವಕಾಶವಾಗಿ, ಇಂಜೆಕ್ಷನ್ ತೆಗೆದುಕೊಳ್ಳುವ ವಿಧಾನ, ಅದರಿಂದ ನೋವೇನೂ ಆಗುವುದಿಲ್ಲ ಎಷ್ಟು ತೆಗೆದುಕೊಳ್ಳಬೇಕು ಎಂಬುದರ ಬಗ್ಗೆ ತಿಳುವಳಿಕೆ ಕೊಟ್ಟರು.)

ಸಾಕಮ್ಮ : ಡಾಕ್ಟರೇ ಫೀಸು ಎಷ್ಟು ?

ಡಾಕ್ಟರ್ : ಫೀಸಿನ ವಿಷಯ ಹಾಗಿರಲಿ. ನಿನ್ನ ಆರೋಗ್ಯದ ದೃಷ್ಟಿಯಿಂದ ದಿನಾ ಸರಿಯಾಗಿ ಇಂಜೆಕ್ಷನ್ ತೆಗೆದುಕೊಳ್ಳಬೇಕು. ಮಾಂಸ ಹೆಚ್ಚು ತಿನ್ನಬಾರದು. ಅರ್ಧ ಕಿತ್ತಳೆ ಹಣ್ಣನ್ನು ಮಾತ್ರ ದಿನಕ್ಕೆ ತಿನ್ನಬೇಕು.

ಸದ್ಯಕ್ಕೆ ಸಿಹಿಯನ್ನು ಮುಟ್ಟಲೇಬಾರದು. ಪ್ರತಿದಿನ ಅರ್ಧ ಘಂಟೆ ತೋಟದಲ್ಲಿ ಓಡಾಡಬೇಕು. ಮುಂದಿನ ಸಾರಿ ಬಂದಾಗ ಶುಗರ್ ಲೆವಲ್ ಕಮ್ಮಿಯಾಗಿ ಇರಲೇಬೇಕು.

ಸಾಕಮ್ಮ : ಸರಿ ಡಾಕ್ಟರ್ ಫೀಸೆಷ್ಟು ?

ಡಾಕ್ಟರ್ : ರೂ.300 ಕೊಡಮ್ಮ ಸಾಕು.

ಸಾಕಮ್ಮ : ಬೇಕಾದರೆ ರೂ.500 ಕೊಡುತ್ತೇನೆ ಡಾಕ್ಟರೆ ಇನ್ನೆರಡು ಮಾತ್ರೆ ಜಾಸ್ತಿ ಕೊಡಿ, ಇಂಜೆಕ್ಷನ್ ತಪ್ಪಿಸಿ.

ಡಾಕ್ಟರ್ : ಹಾಗಾಗುವುದೇ ಇಲ್ಲ. ಇಂಜೆಕ್ಷನ್ ತೆಗೆದುಕೊಳ್ಳುವುದಾದರೆ ಮುಂದಿನ ತಿಂಗಳು ನನ್ನ ಹತ್ತಿರ ಮತ್ತೆ ಪರೀಕ್ಷೆಗೆ ಬಾ. ಇಲ್ಲದಿದ್ದರೆ ಬೇರೆ ಡಾಕ್ಟರ್ ಹತ್ತಿರ ಹೋಗಬಹುದು.

ಸಾಕಮ್ಮ : ಇಲ್ಲ ಡಾಕ್ಟರೇ, ನೀವು ಹೇಳಿದ್ದಂಗೆ ಮಾಡ್ತೀನಿ. ಮುಂದಿನ ತಿಂಗಳು ಬರ್ತೀನಿ ಆಮೇಲೆ ಇಂಜೆಕ್ಷನ್ ತಪ್ಪಿಸಿಬಿಡಿ.

ಡಾಕ್ಟರ್ : ನೋಡೋಣ ಬಾ ಹೋಗು.

ಸಾಕಮ್ಮ ಅತ್ಯಂತ ಖಿನ್ನಳಾಗಿ ಕ್ಲಿನಿಕ್‌ನಿಂದ ಹೊರಗೆ ಹೋದಳು.

ಡಾಕ್ಟರ್ : (ನನಗೆ) ನೋಡಿ ಡಯಾಬಿಟೀಸ್ ಈಗ ಗ್ರಾಮೀಣ ಮಹಿಳೆಯರನ್ನೂ ಕಾಡುತ್ತಿದೆ. ಅವರಿಗೆ ತಿಳುವಳಿಕೆ ಕೊಡುವುದೇ ಕಷ್ಟವಾಗಿ ಬಿಟ್ಟಿದೆ. ಎಂದು ನಿಟ್ಟುಸಿರು ಬಿಟ್ಟರು.

ಸುಮಾರು ವರ್ಷಗಳಿಂದ ರಾಜಕಾರಣದಲ್ಲಿದ್ದವರೊಬ್ಬರು ಎಷ್ಟು ಆಸ್ತಿ ಮಾಡಿದ್ದೀನಿ ಎಂದೇ ಅವರಿಗೆ ತಿಳಿದಿರಲಿಲ್ಲ. ಎಲ್ಲ ವ್ಯವಹಾರಗಳನ್ನೂ ಅವರ ಚಾರ್ಟೆಡ್ ಅಕೌಂಟೆಂಟ್ ನೋಡಿಕೊಳ್ಳುತ್ತಿದ್ದರು. ಅದೇಕೋ ತಮ್ಮ ಆಸ್ತಿ ಎಷ್ಟಿದೆ ಎಂದು ತಿಳಿದುಕೊಳ್ಳಬೇಕು ಅಂದುಕೊಂಡು ಒಂದು ದಿನ ಅವರು ಚಾರ್ಟೆಡ್ ಅಕೌಂಟೆಂಟ್ ಅವರನ್ನು ಕರೆದು ನನ್ನ ಒಟ್ಟು ಆಸ್ತಿ ಎಷ್ಟಿದೆ ಎಂದು ನನಗೆ ಹೇಳಿ ಎಂದರು. ಎರಡು ದಿನ ತೆಗೆದುಕೊಂಡ ಚಾರ್ಟೆಡ್ ಅಕೌಂಟೆಂಟ್ ಬಂದು ಸರ್, ನಿಮ್ಮ ಒಟ್ಟು ಆಸ್ತಿ ಎಷ್ಟಿದೆ ಎಂದರೆ ಇನ್ನು ಏಳು ತಲೆಮಾರುಗಳೂ ಕೂಡಾ ಕೂತು ಸುಖ ಪಡುವಷ್ಟು ಇದೆ ಎಂದರು. ಇದನ್ನು ಕೇಳಿ ರಾಜಕಾರಿಣಿ ಬಹಳ ಖಿನ್ನರಾದರು. ಏಕೆ ಸರ್ ಅಂತ ಕೇಳಿದರೆ, ಇರುವ ಆಸ್ತಿ ನನ್ನ ಏಳನೇ ತಲೆಮಾರಿನವರಿಗೆ ಮಾತ್ರ ಆಗುತ್ತದೆ ಎಂದರೆ ನನ್ನ ಎಂಟನೇ ತಲೆಮಾರಿನ ಗತಿ ಏನು ಅಂದಾಗ ಚಾರ್ಟೆಡ್ ಅಕೌಂಟೆಂಟ್ ಸುಸ್ತು.

# RAMAIAH
Indic Specialty Ayurveda

RESTORATION HOSPITAL

## Ramaiah Ayurveda

- General Medicine
- Pain Clinic
- Dermatology
- Ophthalmology
- Gynaecology & Obstetrics
- Paediatrics
- Geriatrics
- Preventive Medicine (Wellness, Well - Being)
- Yoga
- Ayurvedic Para-Surgical Procedures

Proud to Announce
**NABH Accrediation**



Under the Leadership of
**Prof. Dr. G.G. Gangadharan**

## World Renowned Doctors



First Franchise
Bannerghatta




First Joint Venture
Penang, Malaysia




First Branch
Yelahanka New Town

24/7 Emergency Healthcare
Attached to Memorial Hospital
Spacious in Patient Facility

Free Telephonic Consultation
**080 22183456, 80 99 95 95 95**

New BEL Road, M S Ramaiah Nagar, Bengaluru - 560 054, www.msricaim.com

# ಭಾರತದ ಮೊಟ್ಟಮೊದಲ
# ಸಾರ್ವಜನಿಕ ಔಷಧ ಪ್ರಯೋಗಾಲಯ ಸಂಸ್ಥೆ



















- ನೀವು ಕುಡಿಯುವ ನೀರು ಶುದ್ಧವೇ?
- ನಿಮ್ಮ ಮಕ್ಕಳ ತಿನಿಸುಗಳಲ್ಲಿ ಹಾನಿಕಾರಕ ಅಂಶಗಳಿವೆಯೇ?
- ನಿಮ್ಮ ಮನೆಯ ಅಂಗಳದಲ್ಲಿ ಅಥವಾ ಹೊಲದ ಮಣ್ಣಿನಲ್ಲಿ ವಿಷಕಾರಿ ಅಂಶವಿದೆಯೇ?
- ನೀವು ಸೇವಿಸುವ ಗಿಡಮೂಲಿಕೆ ಔಷಧಿಗಳಲ್ಲಿ ಹಾನಿಕಾರಕ ಅಂಶವಿದೆಯೇ?
- ಹಾಳಾದ ಅಥವಾ ಕಲಬೆರಕೆ ತಿನಿಸುಗಳ ಭಯವೇ?
- ಮೂತ್ರ, ರಕ್ತದಲ್ಲಿ ವಿಷಕಾರಿ ಅಥವಾ ಖನಿಜಾಂಶಗಳ ಪರೀಕ್ಷೆ ಮಾಡಿಸಬೇಕೆ?

ಈ ಎಲ್ಲಾ ಸಂದೇಹಗಳಿಗೆ ಶೀಘ್ರದಲ್ಲಿ ಉತ್ತರ ಪಡೆಯಲು ಹಾಗೂ ನೀವು ಆರೋಗ್ಯಕರ ಪದಾರ್ಥಗಳನ್ನು ಸೇವಿಸುವಂತಾಗಲು ನೀರು, ಆಹಾರ, ಮಣ್ಣು ಹಾಗೂ ಔಷಧಿಗಳನ್ನು ಪರೀಕ್ಷೆ ಮಾಡಿಸಿ.

RAMAIAH

## RAMAIAH ADVANCED TESTING LAB
## RAMAIAH ADVANCED TRAINING CENTRE

**CERTIFICATE TRAINING PROGRAMS * PROJECTS * P.G. DIPLOMA
ON MODERN METHODS OF ANALYSIS FOR FOOD / DRUG / ENVIRONMENT
FOR GRADUATES & POST-GRADUATES IN SCIENCE, ENGG, PHARMACY,
BIO-CHEMISTRY, BIO-TECHNOLOGY**

Opp. Ramaiah Hospital, 80 Ft Road, New BEL Road,Bengaluru – 560 054
Call 9844163329; 080 4091 8017,
E – mail: msrdtl@gmail.com or just drop in!

# ಗೊರೂರರ ತಿಳಿಹಾಸ್ಯದ ನೂರೆಂಟು ಮುಖಗಳು

– **ಸುಕೇಶವ**

ಬರವಣಿಗೆಯ ವಿಚಾರದಲ್ಲಿ ಒಂದು ಮಾತಿದೆ. ಬರೆಯುವ ಮುನ್ನ ಚನ್ನಾಗಿ ಓದಬೇಕು, ಹಾಗೆ ಓದಿದ ನಂತರ ಬರೆದರೆ ಚನ್ನಾಗಿ ಓದುವಂತೆ ಬರೆಯಬೇಕು ಅಂತ. ಗೊರೂರರ ವಿಚಾರದಲ್ಲಿ ಇದು ನಿಜವಾದ ಮಾತು. ಅವರ ಬಾಲ್ಯಾವಸ್ಥೆಯಲ್ಲಿ ಅವರಿಗಿದ್ದ ಬಡತನ, ಮುಂದೆ ಬದುಕಿನಲ್ಲಿ ಕಂಡ ನೂರಾರು ಏಳುಬೀಳುಗಳು, ಸ್ವಾತಂತ್ರ ಚಳುವಳಿಯಲ್ಲಿ ಭಾಗವಹಿಸಿದ ಅನುಭವಗಳು ಇವುಗಳೆಲ್ಲದರ ಜೊತೆಗೆ ಅವರೊಂದಿಗೆ ಇದ್ದು ಅವರನ್ನು ಸಾಹಿತ್ಯ ಲೋಕದಲ್ಲಿ ಶ್ರೀಮಂತರನ್ನಾಗಿ ಮಾಡಿದ್ದು ಅವರ ಊರಿನ ಅನುಭವಗಳು. ಅವುಗಳನ್ನು ಮೆಲುಕು ಹಾಕುವುದೇ ಒಂದು ಸೊಗಸು. ಗರುಡಗಂಬದ ದಾಸಯ್ಯ, ಹಳ್ಳಿಯ ಚಿತ್ರಗಳು, ನಮ್ಮ ಊರಿನ ರಸಿಕರು, ಬೈಲಹಳ್ಳಿಯ ಸರ್ವೆ, ಹೇಮಾವತಿಯ ತೀರದಲ್ಲಿ ಮುಂತಾದುವುಗಳನ್ನು ನಾವು ಓದುತ್ತಾ ಕೂತರೆ ಭಾರತದ ಗ್ರಾಮ ವಾಸ್ತವ್ಯದ ಪರಿಚಯವಾಗುತ್ತದೆ. ಜೊತೆಜೊತೆಗೆ ಆಗಿನ ಜೀವನ ಕ್ರಮ, ಜನರ ಮನೋಭಾವ, ಅವರ ನಡವಳಿಕೆ, ನ್ಯಾಯಪರತೆ, ಹೀಗೆ ವ್ಯಕ್ತಿಗಳ ನಾನಾ ಮುಖಗಳನ್ನು ಕಾಣಬಹುದು.

ನಾನು ಅವರನ್ನು ಭೇಟಿ ಮಾಡಿದ್ದು ಒಂದು ವಿಚಿತ್ರ ಸನ್ನಿವೇಶದಲ್ಲಿ. ಮೈಸೂರಿನಲ್ಲಿ ನಡೆದ ಪ್ರಥಮ ವಿಶ್ವ ಕನ್ನಡ ಸಮ್ಮೇಳನಕ್ಕೆ ನಾನು ಒಬ್ಬ ವಿಶೇಷ ಆಹ್ವಾನಿತ. ಒಂದು ಮಧ್ಯಾಹ್ನ ನಾನು ಬೆಂಗಳೂರು ಬಸ್ ಸ್ಟಾಂಡಿಗೆ ಹೋಗಿ ಮೈಸೂರಿಗೆ ಹೋಗೋ ಪ್ಲಾಟ್‌ಫಾರಂನಲ್ಲಿ ನಿಂತೆ. ಸ್ವಲ್ಪ ಹೊತ್ತಿಗೆ ಒಬ್ಬರು ಖಾದೀ ಕಚ್ಚೆ ಪಂಚೆ ಮತ್ತು ಜುಬ್ಬ ತೊಟ್ಟು ಕೈನಲ್ಲಿ ಒಂದು ಬಂಡಲ್ ಪುಸ್ತಕಗಳನ್ನು ಇಟ್ಟುಕೊಂಡು ಬಂದು ನಿಂತರು. ಅವರನ್ನು ನೋಡಿದೊಡನೇ ಅದೇನೋ ಒಂದು ರೀತಿ ಆಕರ್ಷಣೆ ಬಂತು. ಅವರ ಕೆಲವು ಪುಸ್ತಕಗಳನ್ನು ನಾನು ಓದಿದ್ದೆನಾದರೂ, ಆ ಪುಸ್ತಕಗಳಲ್ಲಿ ಲೇಖಕರ ಭಾವ ಚಿತ್ರ ಇಲ್ಲದೇ ಇದ್ದುದರಿಂದ ಅವರೇ ಇವರು ಅಂತ ಖಚಿತವಾಗುತ್ತಿರಲಿಲ್ಲ. ಆದರೂ ಅವರನ್ನು ನೋಡಿದೊಡನೇ ಇವರೇ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಇರಬೇಕು ಅಂತ ಮಾತಾಡಿಸಿದೆ. ನನ್ನ ಊಹೆ ನಿಜವಾಯಿತು. ಅವರು ಬಾಯ್ ತುಂಬಿ ಮಾತಾಡಿದರು. ಅಚ್ಚರಿ ಅಂದರೆ ಅವತ್ತು ಅಲ್ಲಿ ಬಸ್ ಸ್ಟಾಂಡಿನಲ್ಲಿ ಇನ್ಯಾರಿಗೂ ಇವರು ಗೊರೂರು ಅಂತ ಗೊತ್ತಾಗಲಿಲ್ಲ. ಬಸ್ಸಿನಲ್ಲೂ ಯಾರೂ ಅವರನ್ನು ಗುರುತು ಹಿಡಿಯಲಿಲ್ಲ.

ಲೇಖಕರಿಗೆ ಅವರವರ ಅನುಭವಗಳು ಸಾಕಷ್ಟು ಮುದಕೊಡುತ್ತವೆ. ಅವುಗಳನ್ನು ಲೇಖನಕ್ಕಿಳಿಸಿ ಓದುಗರಿಗೆ ಕೊಡೋ ಜವಾಬ್ದಾರಿ ಲೇಖಕನ ಮೇಲಿರುತ್ತವೆ. ಇದನ್ನು ಗೊರೂರು ಮಾಡಿದರು ನಾನು ಮಾಡಲಿಲ್ಲ. ಅದಕ್ಕೆ ಒಂದು ಉದಾಹರಣೆ ಕೊಡುತ್ತೇನೆ ಓದಿ.

ಎಮ್ಮೆ ಕರು ಹಾಕಿದ ಪ್ರಸಂಗ ಲೇಖನದಲ್ಲಿ ಅವರ ಹಳ್ಳಿಯಲ್ಲಿ ಒಂದು ಎಮ್ಮೆ ಇರುತ್ತೆ. ಅದರ ವಿಶೇಷ ಏನಪ್ಪಾ ಅಂದರೆ ಅದು ನಿಂತುಕೊಂಡು ಕರುವನ್ನು ದೊಪ್ಪಂತ ನೆಲಕ್ಕೆ ಹಾಕುತ್ತದೆ. ಆ ಎಳೆಗರುಗೆ ತುಂಬಾ ಪೆಟ್ಟಾಗಬಹುದು ಅಂತ ಮನೆಯವರಿಗೆ ಆತಂಕ. ಅದಕ್ಕೇ ಮುಂದಿನ ಸಾರಿ ಅದು ಕರು ಹಾಕುವಾಗ ನಾನು ಇರುತ್ತೇನೆ ಅಂತ ಗೊರೂರರು ಹೇಳಿದ್ದರು. ಅಂತೆಯೇ ಎಮ್ಮೆ ಗಬ್ಬ ಆಗಿ ಇನ್ನೇನು ಕರು ಹಾಕಬೇಕು ಅನ್ನುವ ದಿವಸ ಗೊರೂರರು ಒಬ್ಬ ಆಳಿನ ಜೊತೆ ಕೊಟ್ಟಿಗೆಯಲ್ಲಿ ಇದ್ದರು. ಎಮ್ಮೆ ಕರು ಹಾಕುವ ಪ್ರಸಂಗ ಬಂದಾಗ ಆಳಿನ ಜೊತೆ ಗೊರೂರರು ಒಂದು ಗೋಣೀ ಚೀಲ ಹಿಡಿದು ಎಮ್ಮೆಯ ಹಿಂದುಗಡೆ ನಿಂತರು. ಅದು ಯಾವ ಸಮಯದಲ್ಲಿ ಕರು ಹಾಕಿದರೂ ಅದು ಗೋಣೀ ಚೀಲದ ಮೇಲೆ ಬೀಳಬೇಕು. ಎಮ್ಮೆ ಇವರಿಬ್ಬರ ಕಡೆ ನೋಡಿತು ನಂತರ ಇನ್ನೊಂದು ಕಡೆ ತಿರುಗಿತು. ಗೊರೂರರರೂ ಆ ಕಡೆಗೆ ತಿರುಗಿದರು. ಎಮ್ಮೆ ಮತ್ತೆ ತಿರುಗಿತು. ಗೊರೂರರರೂ ಆ ಕಡೆಗೇ ತಿರುಗಿ ನಿಂತರು. ಹೀಗೆ ಗೊರೂರರಿಗೆ ಎಮ್ಮೆಯ ಹಿಂದೆ ಹಿಂದೆ ಗೋಣೀಚೀಲ ಹಿಡಿದು ನಿಲ್ಲೋದೇ ಆಯಿತು. ಒಂದು ಸನ್ನಿವೇಶದಲ್ಲಿ ಗೊರೂರರು ಸ್ವಲ್ಪ ಗಮನ ಬೇರೆಡೆ ತಿರುಗಿಸಿದ್ದಾಗ ಎಮ್ಮೆ ದೊಪ್ಪಂತ ಕರೂನ ನೆಲದ ಮೇಲೆ ಎಸೆದಾಗಿತ್ತು. ಕಣ್ಣು ಮುಚ್ಚಿ ಬಿಡುವಷ್ಟರಲ್ಲಿ ನಡೆದ ಈ ಘಟನೆಯಿಂದ ಗೊರೂರರು ಎಲಾ ಎಮ್ಮೆಯೇ ನೀನು ನನಗಿಂತ ಬುದ್ಧಿವಂತ ಅಂತ ತೋರಿಸಿಬಿಟ್ಟೆಯಲ್ಲ ಅಂತ ಸ್ವಾರಸ್ಯವಾಗಿ ಬರೆಯುತ್ತಾರೆ.

ಇನ್ನು ನನ್ನ ಅನುಭವ ಕೇಳಿ. ನಮ್ಮ ತಂದೆಯ ತಂಗಿಯ ಊರು ಕೊತ್ತನ ಘಟ್ಟ. ಇದು ಶ್ರವಣಬೆಳಗೊಳಕ್ಕೆ ಮೂರ್‍ನಾಲ್ಕು ಕಿಲೋಮೀಟರು ದೂರದ ಕೊತ್ತನಘಟ್ಟ ಎನ್ನುವ ಊರಿನಲ್ಲಿದೆ. ಒಂದು ಬೇಸಿಗೆಯಲ್ಲಿ ನಾನು ನನ್ನ ತಂದೆಯೊಂದಿಗೆ ಕೊತ್ತನಘಟ್ಟಕ್ಕೆ ಹೋದಾಗ ಅವರ ಮನೆಯಲ್ಲಿ ಒಂದು ಹಸು ಗಬ್ಬ ಆಗಿತ್ತು. ನಾವು ಒಂದೆರಡು ದಿನ ಇದ್ದು ಊರಿಗೆ ಹೊರಟಾಗ ನಮ್ಮಾವ ಇನ್ನೊಂದೆರಡು ದಿನ ಇರಿ ಹಸು ಕರು ಹಾಕುತ್ತೆ. ಗಿಣ್ಣ ಹಾಲು ಕೊಡ್ತೀನಿ ತಗೊಂಡು ಹೋಗ್ತೀರಂತೆ ಅಂದರು. ನಾವು ನಿಂತೆವು. ಮುಂದೆ ಎರಡು ದಿನ ಆದರೂ ಹಸು ಕರು ಹಾಕಲಿಲ್ಲ. ನಮ್ಮ ತಂದೆ ಅದರ ಮೈ ಸವರುತ್ತಾ ಬೇಗ ಕರು ಹಾಕಮ್ಮಾ, ನಾವು ಊರಿಗೆ ಹೋಗಬೇಕು. ನಿನ್ನ ಗಿಣ್ಣ ಹಾಲು ತಗೊಂಡು ಹೋಗಬೇಕು ಅಂತ ಹೇಳುತ್ತಾ ಇದ್ದರು. ಆದರೂ ಅದು ಕರು ಹಾಕಲಿಲ್ಲ. ಅದಕ್ಕೆ ನಮ್ಮ ತಂದೆ ಈ ಹಸು ನಾವು ಊರಿಗೆ ಹೋದ ಮೇಲೇ ಕರು ಹಾಕೋದು ಅಂತ ತೀರ್ಮಾನ ಮಾಡಿರಬೇಕು. ನಾವು ನಾಳೆ ಹೊರಡ್ತೀವಿ ಅಂದರು. ಹಾಗೆ ನಾವು ಮಾರನೇ ದಿನ ಊರಿಗೆ ಬಂದು ತಲುಪಿದ ಮಾರನೇ ದಿನ ಹಸು ಕರು ಹಾಕ್ತಂತೆ.

ಗೊರೂರರ ಅನೇಕ ಲೇಖನಗಳಲ್ಲಿ ಮುದ ಕೊಡುವ ಸನ್ನಿವೇಶಗಳಿವೆ ಹಾಗೂ ಅವುಗಳಲ್ಲಿ ತಿಳಿ ಹಾಸ್ಯವಿದೆ. ಅವುಗಳನ್ನು ಓದುವಾಗ ನಮಗೆ ನಮ್ಮ ಗ್ರಾಮೀಣ ಪರಿಸರದ ಅನುಭವ ಆಗೋದಂತೂ ನಿಜ. ಹಳ್ಳಿಯಲ್ಲಿ ಹುಟ್ಟಿ

ಬೆಳೆದವರಿಗೆ ಆ ಅನುಭವ ಮತ್ತೆ ಮರುಕಳಿಸಿದರೆ, ಹಳ್ಳಿಯ ಪರಿಸರವನ್ನೇ ಕಾಣದವರಿಗೆ ಇದೊಂದು ವಿಶೇಷ ರೀತಿಯ ಅನುಭವ. ಆದರೆ ಗೊರೂರ ಬರವಣಿಗೆ ಅಂದರೆ ಅದೊಂದು ಕನ್ನಡಿ ಎನ್ನಬಹುದು. ಕಣ್ಣಿಗೆ ಕಟ್ಟುವಂತೆ ಸನ್ನಿವೇಶಗಳನ್ನು ಪ್ರಸ್ತುತಪಡಿಸುವುದರಲ್ಲಿ ಗೊರೂರರಿಗೆ ಗೊರೂರರೇ ಸಾಟಿ.

ಕೆಲವು ಪ್ರಸಂಗಗಳನ್ನು ನೆನೆಯೋಣ

ವಿಧವಾ ವಿವಾಹ ಎನ್ನುವ ಲೇಖನದಲ್ಲಿ ಕರುಣ ಎಂಬ ಹುಡುಗಿ ವಿಧವೆಯಾಗುತ್ತಾಳೆ. ಮುಂದೆ ಅವಳು ತನ್ನ ಬಾಳನ್ನು ಬರಡಾಗಲು ಬಿಡದೇ ಮದರಾಸಿಗೆ ಹೋಗಿ ವಿದ್ಯಾಭ್ಯಾಸ ಮಾಡಿ ಮತ್ತೆ ಹಳ್ಳಿಗೆ ಬಂದು ಅಲ್ಲಿ ಸಮಾಜೋದ್ಧಾರ ಕಾರ್ಯಗಳಾದ ವಿಧವಾ ವಿವಾಹ, ನಗರಾಭಿವೃದ್ಧಿ, ನೈರ್ಮಲ್ಯದ ಅವಶ್ಯಕತೆ, ವಿವಾಹ ವಿಚ್ಛೇದನ ಮುಂತಾದ ವಿಷಯಗಳ ಬಗೆಗೆ ಜನರಲ್ಲಿ ಜಾಗೃತಿ ಮೂಡಿಸುತ್ತಾಳೆ. ಆಗ ಆ ಹಳ್ಳಿಯ ಯುವಕರೆಲ್ಲ ನಾವು ಮದುವೆಯಾದರೆ ವಿಧವೆಯರನ್ನೇ ಅಂತ ಸಂಕಲ್ಪ ಮಾಡುತ್ತಾರೆ. ಇದರಿಂದಾಗಿ ಇನ್ನೂ ಮದುವೆಯಾಗದ ಹುಡುಗಿಯರಿಗೆ ಮದುವೆಯೇ ಆಗದಂತಹ ಪರಿಸ್ಥಿತಿ ಬರುತ್ತೆ. ಯಾಕೆಂದರೆ ಎಲ್ಲ ಹುಡುಗರೂ ವಿಧವೆಯರನ್ನೇ ಹುಡುಕುತ್ತಿದ್ದಾರೆ. ಹಾಗೆ ಆ ಊರಿನಲ್ಲಿರುವ ವಿಧವೆಯರಿಗೆಲ್ಲಾ ಕಂಕಣ ಭಾಗ್ಯ ಬಂದು ಇನ್ನು ಆ ಹಳ್ಳಿಯಲ್ಲಿ ವಿಧವೆಯರೇ ಇಲ್ಲ ಎನ್ನುವಂತಾಗುತ್ತದೆ. ಹಾಗಾಗಿ ಆ ಹಳ್ಳಿಯಲ್ಲಿ ಮದುವೆಗಳೇ ಆಗುತ್ತಿರೋದಿಲ್ಲ. ಆ ಹಳ್ಳಿ ಮತ್ತೆ ಮೊದಲಿನಂತೆ ಆಗುವುದು ಯಾವಾಗಪ್ಪಾ ಅಂದರೆ, ವಿಧವೆಯಾದ ಕರುಣಳೇ, ರಾಮಚಂದ್ರ ಎನ್ನುವ ಹುಡುಗನನ್ನು ಮದುವೆಯಾಗೋದರ ಜೊತೆಗೆ ಆ ಊರನ್ನೇ ಬಿಟ್ಟು ಹೋಗುತ್ತಾಳೆ. ನಂತರ ಹಳ್ಳಿ ಯಥಾಪ್ರಕಾರಕ್ಕೆ ಬರುತ್ತದೆ. ಗೊರೂರು ಈ ವಿಷಯವನ್ನು ತಿಳಿಹಾಸ್ಯದ ಲೇಪನದೊಂದಿಗೆ ಬರೆದಿರುವುದು ಮುದ ಕೊಡುತ್ತದೆ.

ಹಾಗೇ ಇನ್ನೊಂದು ಪ್ರಸಂಗ ನೋಡೋದಾದರೆ ಬಯಲಾಟ. ಹಳ್ಳಿಗಳಲ್ಲಿ ನಡೆಯುವ ಬಯಲಾಟದ ಮಜವೇ ಮಜ. ಒಂದು ಪ್ರಸಂಗ. ದ್ರೌಪದೀ ವಸ್ತ್ರಾಪಹರಣ. ಅದರಲ್ಲಿ ರಂಗ ದ್ರೌಪದೀ ಪಾತ್ರಧಾರಿ. ನಿಯಮದಂತೆ ಮೂರು ಸೀರೆ ಉಡಬೇಕು. ಆದರೆ ಆ ಬಾರಿ ಅವನು ಏಳು ಸೀರೆ ಉಟ್ಟಿದ್ದ. ಅದರೊಳಗೆ ಒಂದು ಹೊಸಾ ರೇಷ್ಮೆ ಸೀರೆ. ಅದು ಪ್ರೇಕ್ಷಕರಿಗೆ ಕಾಣಬೇಕು ಎನ್ನುವ ಹಂಬಲ ರಂಗನದು. ಹೀಗಾಗಿ ದುಶ್ಶಾಸನ ಪಾತ್ರಧಾರಿಗೆ ಏಳು ಸೀರೆ ಎಳೆಯುವಂತೆ ಹೇಳಿದ್ದ. ಆದರೆ ನಾಟಕ ಷುರುವಾದಾಗ ದುಶ್ಶಾಸನನಿಗೆ ಮೂರು ಸೀರೆ ಎಳೆಯುವಷ್ಟರಲ್ಲೇ ಸುಸ್ತಾಯಿತು. ಕುಸಿದು ಕುಳಿತ. ರಂಗ ಇನ್ನೂ ಸೀರೆ ಎಳಿ ಎಳಿ ಅಂದ. ಆದರೂ ಅವನು ಎಳೆಯಲಿಲ್ಲ. ಅದಕ್ಕೆ ದ್ರೌಪದಿ ಹೇಡಿಯಾದ ನಿನ್ನಿಂದ ನನ್ನ ಸೀರೆ ಎಳೆಯಲು ಆಗದಿದ್ದರೆ ಇದೋ ನಾನೇ ನನ್ನ ಸೀರೆಯನ್ನು ಬಿಚ್ಚಿ ಹಾಕುತ್ತೇನೆ ಅಂದು ಇನ್ನು ನಾಲ್ಕು ಸೀರೆಯನ್ನು ಕಿತ್ತೆಸೆದು ಹೊಸಾ ರೇಷ್ಮೆ ಸೀರೆ ಕಾಣುವಂತೆ ರಂಗದ ಮೇಲೆ ನಿಂತ. ಜನರೆಲ್ಲಾ ಹೋ ಅಂದರು.

ಬೈಲಹಳ್ಳಿ ದೇವರಿಗೆ ನಾಯಿಯೇ ಕಾವಲು ಎಂದರೆ ನಿಮಗೆ ಅಚ್ಚರಿ ಮೂಡಬಹುದು. ಅದರ ಕತೆಯೂ ಸ್ವಾರಸ್ಯವಾಗಿದೆ. ಒಂದು ಸಾರಿ ದೇವರ ಸಾಲಿಗ್ರಾಮಕ್ಕೆ ಹಾಕಿದ್ದ ಸರವನ್ನು ಯಾರೋ ಕದ್ದರಂತೆ. ಹೇಗೆ ಹುಡುಕುವುದು ಅಂತ ಎಲ್ಲಾ ಯೋಚನೆಯಲ್ಲಿದ್ದಾಗ ಪೂಜಾರಿ ಚನ್ನಾಗಿ ಮೆಣಸಿನ ಕಾಯಿಯನ್ನು ಅರೆದು ಅದನ್ನು ಲಿಂಗಕ್ಕೆ ಹಚ್ಚಿದನಂತೆ. ಬೆಳಗಾಗುವುದರಲ್ಲಿ ನರಸೀಪುರದ ದಾರೀಲಿ ಹೋಗುತ್ತಿದ್ದವನಿಗೆ ಮೈಯೆಲ್ಲಾ ಉರಿ ಕಿತ್ಕೊಂಡು ಅವನು ತಾನು ಕದ್ದಿದ್ದ ಸಾಲಿಗ್ರಾಮದ ಸರದ ಸಮೇತ ಬಂದು ದೇವರಿಗೆ ಒಪ್ಪಿಸಿದನಂತೆ. ಅವನಿಗೆ ಶಿಕ್ಷೆಯಾಯಿತು. ಆದರೆ ಲಿಂಗಕ್ಕೆ ಮೆಣಸಿನಕಾಯಿ ಅರೆದಿದ್ದ ಉರಿ ಹೋಗಬೇಕಲ್ಲ. ಅದಕ್ಕೆ ಅರಮನೆಯಿಂದ ನೂರು ಹಸುಗಳಿಂದ ಹಾಲು ಕರೆಸಿ ಅಭಿಷೇಕ ಮಾಡಿದರಂತೆ. ಅಲ್ಲಿಂದೀಚೆಗೆ ಆ ನಾಯಿ ದೇವಸ್ಥಾನಕ್ಕೆ ಕಾವಲು  ಇದೆಯಂತೆ.

ಇದನ್ನು ಓದುವಾಗ ತುಂಬಾ ಹಿಂದೆ, ಅಂದರೆ ಅರವತ್ತರ ದಶಕದಲ್ಲಿ ನೀವು ಕನ್ನಡ ಸಿನಿಮಾ ನೋಡುತ್ತಿದ್ದರೆ ಇಂಥದೇ ಒಂದು ಪ್ರಸಂಗ ಇರುವ ಸಿನಿಮಾ ನೆನಪಿಗೆ ಬರಬಹುದು. ಅದು ಚಂದವಳ್ಳಿಯ ತೋಟ. ಅದರಲ್ಲಿ ಊರಿನಲ್ಲಿ ಮಳೆ ಆಗಿಲ್ಲ. ಬೆಳೆ ಒಣಗಿ ಹೋಗಿದೆ. ಜಾನುವಾರುಗಳಿಗೆ ಕುಡಿಯುವ ನೀರಿಲ್ಲ. ನೆಲ ಬಿರುಕು ಬಿಟ್ಟಿದೆ. ಜನ ತತ್ತರಿಸಿ ಹೋಗಿದ್ದಾರೆ. ಊರಿನ ಜನ ಹನುಮಂತನಿಗೆ ವಿಶೇಷ ಪೂಜೆ ಮಾಡಿ ಬೇಡಿಕೊಳ್ಳೋಣ ಅಂದ್ರೆ ಊರಿನ ಗೌಡ ಹನುಮಂತನಿಗೆ ಪೂಜೆ ಮಾಡ್ತೀನಿ ಅಂದು ಮನೆಗೆ ಹೋಗಿ ಮೆಣಸಿನ ಕಾಯಿಯನ್ನು ಚನ್ನಾಗಿ ಅರೆದು ತಂದು ಹನುಮಂತನ ಹೊಟ್ಟೆಗೆ ಸವರಿ, ನೀನು ನಮ್ಮ ಊರಿಗೆ ಮಳೆಯಾಗದಂತೆ ಮಾಡಿ ನಮ್ಮ ಊರಿನ ಜನರ ಹೊಟ್ಟೆ ಉರಿಸ್ತಾ ಇದೀಯಲ್ಲಿ, ನಿನ್ನ ಹೊಟ್ಟೆಯೂ ಹೀಗೆಯೇ ಉರಿಯಲಿ ಅಂತಾನೆ. ಕಾಕತಾಳೀಯ ಎನ್ನುವಂತೆ ಮಾರನೇ ದಿನವೇ ಮಳೆ ಬರುತ್ತದೆ.

ಒಂದು ನಾಯಿಯ ಪ್ರಸಂಗ ಇನ್ನೂ ಚನ್ನಾಗಿದೆ. ಒಂದು ಸಾರಿ ಒಬ್ಬ ಕುರುಬ ತನ್ನ ಮುನ್ನೂರು ಕುರಿ ಹೊಡ್ಕೊಂಡು ಬರ್‍ತಿದ್ನಂತೆ. ಅವನ ಗುಂಪಿನಿಂದ ಎರಡು ಕುರಿ ತಪ್ಪಿಸಿಕೊಂಡು ಹೋದುವಂತೆ. ಅವುಗಳನ್ನು ಹುಡುಕುತ್ತಾ ಹೋದವನಿಗೆ ಕಂಡದ್ದು ಇನ್ನೊಂದು ಕುರಿ ಹಿಂಡು. ಆ ಗುಂಪಿನವನಿಗೆ ನನ್ನ ಎರಡು ಕುರಿಗಳು ನಿನ್ನ ಕುರಿ ಗುಂಪಿಗೆ ಸೇರಿಕೊಂಡಿದೆ ಅಂದನಂತೆ. ಅದಕ್ಕೆ ಆ ಗುಂಪಿನವನು ನನ್ನ ನಾನೂರು ಕುರೀಲಿ ನಿನ್ನ ಎರಡು ಕುರಿ ಯಾವುದು ಅಂತ ಹುಡುಕೋದು, ಕಂಡುಹಿಡಿಯೋದು ಹೇಗೆ. ನೀನೇ ನೋಡಿ ಕರ್‍ಕೊಂಡು ಹೋಗು ಅಂದ್ನಂತೆ. ಇವನಿಗೂ ತನ್ನ ಕುರಿ ಹುಡುಕೋದು ಕಷ್ಟವೇ ಆಯಿತು. ಆ ಕುರುಬನ ಹತ್ತಿರ ಒಂದು ನಾಯಿ ಇತ್ತು. ಅದರ ಹೆಸರು ಸಿಂಗ ಅಂತ. ಅವನು ನಾಯಿಯನ್ನು ಸವರಿ, ಸಿಂಗ ಹೋಗೋ ನನ್ನ ಕುರಿ ಕರ್‍ಕೊಂಡು ಬಾ ಅಂದ್ನಂತೆ. ಆಗ ನಾಯಿ ಕುರಿ ಗುಂಪಿಗೆ ಹೋಗಿ ಅತ್ತಿತ್ತ ಓಡಾಡಿ, ಮೂಸಿ ನೋಡಿ ಕಡೆಗೂ ತನ್ನ ಯಜಮಾನನ ಎರಡು ಕುರಿಗಳನ್ನು ಕರೆದುಕೊಂಡು ಬಂತಂತೆ.

ಈ ಪ್ರಸಂಗ ಓದಿದಾಗ ಒಂದು ಹಿಂದಿ ಸಿನಿಮಾ ನಿಮಗೆ ನೆನಪಿಗೆ ಬಂತೇ, ನನಗಂತೂ ನೆನಪಿಗೆ ಬಂತು. ಅದು ರಾಜೇಶ್ ಖನ್ನಾ ಅಭಿನಯದ ಸಚ್ಚಾ ಝೂಟ. ಅದರಲ್ಲಿ ನಾಯಕ ದ್ವಿಪಾತ್ರಧಾರಿ. ಒಬ್ಬ ಒಳ್ಳೆಯವನು ಇನ್ನೊಬ್ಬ ಕೆಟ್ಟವನು. ಆದರೆ ಸ್ವತ: ಅವನ ತಂಗಿಗೇ ತನ್ನ ನಿಜವಾದ ಅಣ್ಣ ಯಾರು ಅಂತ ತಿಳಿಯೋದಿಲ್ಲ. ನ್ಯಾಯಾಲಯದಲ್ಲಿ ಇಬ್ಬರೂ ಇರ್ತಾರೆ. ಇಬ್ಬರೂ ಒಂದೇ ರೀತಿ ವರ್ತಿಸುತ್ತಾರೆ. ಆಗ ನ್ಯಾಯಾಧೀಶರಿಗೂ ಗೊಂದಲ. ಆಗ ತಂಗಿ ಹೇಳ್ತಾಳೆ ನಮ್ಮನೇಲಿ ಒಂದು ನಾಯಿ ಇದೆ. ಅದು ನನ್ನ ಅಣ್ಣನನ್ನ ಗುರುತು ಹಿಡಿಯುತ್ತೆ ಅಂತ. ಹಾಗೆ ನಾಯಿ ನ್ಯಾಯಾಲಯಕ್ಕೆ ಬಂದು ತನ್ನ ನಿಜವಾದ ಯಜಮಾನನ್ನ ಗುರುತು ಹಿಡಿಯುತ್ತೆ. ಒಳ್ಳೆಯವನನ್ನು ಬಿಡುಗಡೆ ಮಾಡುತ್ತಾರೆ, ಕೆಟ್ಟವನಿಗೆ ಶಿಕ್ಷೆಯಾಗುತ್ತದೆ.

ನಮ್ಮ ಊರಿನ ರಸಿಕರು ಪುಸ್ತಕದಲ್ಲಿ ಇರುವ ಲೇಖನಗಳೆಲ್ಲಾ ಅತ್ಯಂತ ಮನೋಜ್ಞವಾಗಿವೆ. ಒಂದೊಂದು ಲೇಖನದ್ದೂ ಒಂದೊಂದು ಸೊಗಸು. ಎಲ್ಲವನ್ನೂ ಉದಾಹರಿಸಲು ಕಷ್ಟ. ಅದರಲ್ಲಿ ಇಬ್ಬರು ಸ್ನೇಹಿತರು ಮನೆ ಕಡೆ ಹೋಗ್ತಾ ಇರ್ತಾರೆ. ದಾರೀಲಿ ಬಾಳೆ ಹಣ್ಣು ಕಂಡಾಗ ಒಬ್ಬ ಬಾಳೆ ಹಣ್ಣು ಕೊಂಡ್ಕೊಳೋಣ್ವಾ ಅಂತ ಕೇಳಿದರೆ ಇನ್ನೊಬ್ಬ ನನಗೆ ಬೇಡ ನೀನು ಬೇಕಾದರೆ ಕೊಂಡ್ಕೊ ಅಂತಾನೆ. ಸರಿ ಒಬ್ಬ ಎರಡಾಣೆಗೆ 5 ಬಾಳೆ ಹಣ್ಣು ಮತ್ತೆ ಬೆಲ್ಲ ಕೊಂಡ್ಕೊತಾನೆ. ಅವನು ಒಂದು ಬಾಳೆಹಣ್ಣು ಸುಲಿದು ತಿನ್ನುವಾಗ ಇನ್ನೊಬ್ಬನೂ ತಾನೂ ಒಂದು ಹಣ್ಣು ತಿನ್ನುತ್ತಾನೆ. ಮತ್ತೆ ಇನ್ನೊಂದನ್ನೂ ತಿನ್ನುತ್ತಾನೆ. ಆಗ ಮೊದಲನೆಯವನು ಏನಯ್ಯಾ ಬಾಳೆ ಹಣ್ಣು ಬೇಡ ಅಂದ್ಯಲ್ಲ ಅಂದ್ರೆ ಹೌದು ಬೇಡ ಅಂದಿದ್ದೆ. ಆದರೆ ನೀನು ತಿನ್ನುತ್ತಿರುವಾಗ ನಾನು ಯಾಕೆ ಸುಮ್ಮನೆ ಕೂತಿರಬೇಕು ಅದಕ್ಕೇ ನನಗೂ ತಿನ್ನಬೇಕು ಅನಿಸಿತು ಅದಕ್ಕೆ ತಿಂದೆ ಅಂದನಂತೆ. ಅಲ್ಲಿಗೆ ಬಾಳೆ ಹಣ್ಣಿನ ಖರ್ಚು ಉಳಿಸಿದ್ದೂ ಆಯಿತು, ಹೊಟ್ಟೆ ತುಂಬಿಸಿಕೊಂಡಿದ್ದೂ ಆಯಿತು.

ಗರುಡಗಂಬದ ದಾಸಯ್ಯ ಯಾರೂ ಮರೆಯಲಾರದ ಲೇಖನ. ಇದು ಅವರ ಅನುಭವವೇ ಹೌದು. ಗೊರೂರು ಒಂದು ಸಾರಿ ಊರಿಗೆ ಹೊರಟಾಗ ಅವರೂರಿನ ದಾಸಯ್ಯ ಸ್ವಾಮಿ ಬರುವಾಗ ನನಗೆ ಒಂದು ಗರುಡ ಗಂಬ ತಂದ್ಕೊಡಿ. ನಾನಂತೂ ಹೋಗಕ್ಕೆ ಆಗಲ್ಲ. ಈಗ ಇರೋ ಗರುಡಗಂಬ ಹಾಳಾಗಿದೆ ಅಂತ ಬೇಡಿಕೊಂಡಾಗ ಗೊರೂರರು ಆಗಲಿ ಅಂತ ಒಪ್ಪಿಕೊಳ್ಳುತ್ತಾರೆ. ಆದರೆ ಅವರು ಸಂತೆಗೆ ಹೋಗೋದು, ಗರುಡಗಂಬ ಕೊಂಡ್ಕೊಳ್ಳೋದು, ಅದನ್ನು ತರೋದರಲ್ಲಿ ಕಷ್ಟಪಡೋದು, ಕಡೆಗೆ ರೈಲಿನಲ್ಲಿ ಅದನ್ನು ಇಟ್ಟುಕೊಂಡು ಕೂತಾಗ ಅಕ್ಕಪಕ್ಕದ ಪ್ರಯಾಣಿಕರಿಗೆ ಆಗೋ ತೊಂದರೆ. ಗೊರೂರರನ್ನೇ ದಾಸಯ್ಯ ಅಂದ್ಕೊಂಡು ಏನೇನೋ ಪ್ರಶ್ನೆಗಳನ್ನು ಕೇಳೋದು ಇವೆಲ್ಲ ತುಂಬಾ ಕುತೂಹಲಕಾರಿಯಾಗಿ ಮೂಡಿಬಂದಿದೆ. ಕಡೆಗೆ ಅವರು ರೈಲ್ವೇ ಸ್ಟೇಷನ್ನಿನಲ್ಲಿ ಇಳಿದು ಗರುಡಗಂಬವನ್ನು ಪ್ರಹಳ ಪ್ರಯಾಸ ಪಟ್ಟು ತೆಗೆದುಕೊಂಡು ಹೋಗ್ತಿದ್ದಾಗ ಸ್ಟೇಷನ್ ಮಾಸ್ಟರು, ಯಾರೋ ಅದು ದಾಸಯ್ಯ ಅಂತ ಕೂಗಿದರೆ

ಅದುವರೆಗೂ ತಡೆದುಕೊಂಡಿದ್ದ ಸಿಟ್ಟು ನುಗ್ಗಿಬಂದು ಗೊರೂರರು, ಸ್ಟೇಷನ್ ಮಾಸ್ಟರ್ ಕಡೆ ತಿರುಗಿ ನೀನು ದಾಸಯ್ಯ, ನಿಮ್ಮಪ್ಪ ದಾಸಯ್ಯ ಅಂದು ಅಲ್ಲಿಂದ ನಡೆಯುತ್ತಾರೆ.

ಗೊರೂರರ ಲೇಖನಗಳ ವೈಶಿಷ್ಟ್ಯ ಅಂದರೆ ಅವರು ಎಲ್ಲಿಯೂ ಹಾಸ್ಯ ಲೇಪನ ಮಾಡೋಕೆ ಹೋಗಿಲ್ಲ. ಬೇಡದ ಉಪಮೆಗಳನ್ನಾಗಲೀ, ಪ್ರಾಸಗಳನ್ನಾಗಲೀ ಬಳಸೋ ಕಸರತ್ತು ಮಾಡಿಲ್ಲ. ದೊಡ್ಡ ದೊಡ್ಡ ಶಬ್ದಗಳನ್ನು ಪ್ರಯೋಗ ಮಾಡಿಲ್ಲ. ಅನ್ಯಥಾ ವಿಷಯಗಳನ್ನು ಬಳಸಿಲ್ಲ. ಘಟನೆಗಳನ್ನು ತಾವು ಹೇಗೆ ನೋಡಿದರೋ ಹಾಗೇ ಪ್ರಸ್ತುತ ಪಡಿಸಿದ್ದಾರೆ. ಹೀಗಾಗಿ ಅವು ನಮ್ಮ ನಿಮ್ಮ ನಡೆಯುತ್ತಿರವಂಥ ಘಟನೆಗಳೇ ಅನಿಸಿಬಿಡುತ್ತದೆ. ಒಬ್ಬ ಲೇಖಕ ಎಲ್ಲಿ ಹೋದರೂ ಅನುಭವದ ಮೂಟೆಯನ್ನು ಹೊತ್ತುಕೊಂಡು ಬರಬೇಕು ಎನ್ನುವುದು ಗೊರೂರಿಂದ ನಾವು ಕಲಿಯಬೇಕಾದ ವಿಷಯ. ಅವರು ಅಮೆರಿಕಾಕ್ಕೆ ಹೋದಾಗಿನ ಅನುಭವಗಳನ್ನು ಅಮೆರಿಕಾದಲ್ಲಿ ಗೊರೂರು ಅಂತ ಬರೆದಿದ್ದಾರೆ. (ಇಲ್ಲಿ ನನಗೂ ಅವರಿಗೂ ಮತ್ತೊಂದು ಸ್ವಾಮ್ಯವಿದೆ ಅವರು ಅಮೆರಿಕಾ ಪ್ರವಾಸ ಮಾಡಿ ಬಂದಾದ ಮೇಲೆ "ಅಮೆರಿಕಾದಲ್ಲಿ ಗೊರೂರು ಬರೆದರೆ" ನಾನು ಜಪಾನ್ ಪ್ರವಾಸ ಮಾಡಿ ಬಂದು "ಜಪಾನಿನಲ್ಲಿ ಬೇಲೂರು" ಬರೆದೆ)

ಕನ್ನಡ ಸಾರಸ್ವತ ಲೋಕಕ್ಕೆ ಮಹತ್ವದ ಕೊಡುಗೆಗಳನ್ನು ನೀಡಿದ ಗೊರೂರು ಸ್ವಾತಂತ್ರ ಚಳುವಳಿಯ ಸಿಹಿ ಕಹಿಗಳನ್ನೂ ಉಂಡವರು. ಗೊರೂರರಿಗೆ 1974ರಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಗೌರವ ಡಾಕ್ಟರೇಟ್ ಪದವಿ ನೀಡಿದೆ. 1982ರಲ್ಲಿ ಸಿರಸಿಯಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿದ್ದರು. ಇದರ ಜೊತೆಗೆ ಅವರ "ಅಮೆರಿಕಾದಲ್ಲಿ ಗೊರೂರು" ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರೆತಿದೆ.

ಗೊರೂರರು ಬರೆದ ಬರವಣಿಗೆ ತುಂಬಾ ಅಪರೂಪದ್ದು ಮತ್ತು ತುಂಬಾ ಅನುರೂಪವಾದದ್ದು. ಈಗ ಗೊರೂರು ನಮ್ಮಲ್ಲಿಲ್ಲ ಅವರು ಕಂಡಂಥ ಸಮಾಜವೂ ನಮ್ಮಲ್ಲಿಲ್ಲ. ಎಲ್ಲವೂ ಬದಲಾವಣೆಗೊಳ್ಳುತ್ತಿವೆ. ಆದರೆ ಗೊರೂರರಂಥ ಮಹನೀಯರನ್ನು ನೆನೆಸಿ ಮುನ್ನಡೆಯುವ ಅವಕಾಶ ಸಿಕ್ಕಿದ್ದು ನಮ್ಮ ಪುಣ್ಯ.

**ಹೀಗೊಂದಾಸೆ**

ಅಡಿಗಡಿಗೂ ಕನ್ನಡ
ಗಡಿಯಿಂದಾಚೆಗೂ ಕನ್ನಡ
ಇಂಚಿಂಚಿಗೂ ಕನ್ನಡ
ಮಿಂಚಿನಂತಹ ಕನ್ನಡ
ಮೊಳಗಲಿ, ಬೆಳಗಲಿ,
ಕನ್ನಡದ ಕೀರ್ತಿ ಅಂಬರಕೇರಲಿ

# ದೇವರ ಪ್ರಸಾದ

**ಇ.ಆರ್. ರಾಮಚಂದ್ರನ್**

ಪಕ್ಕದ ಮನೆ ಅಂಬುಜಮ್ಮ ನಮ್ಮ ಮನೆಗೆ ಬಂದಾಗ ನನಗೆ ಸಂತೋಷ ಮತ್ತು ಖುಷಿ ಎರಡೂ ಒಟ್ಟಿಗೆ ಆಯಿತು. ಖುಷಿ ಯಾಕೆಂದ್ರೆ ನಾನೇ ಅವರ ಮನೆಗೆ ಹೊಗೋಣಾಂತ ಇದ್ದೆ. ಸಂತೋಷ, ಅವ್ರು ನಮ್ಮ ಮನೆಗೆ ಬಂದು ಬಹಳ ದಿನ ಆಗಿತ್ತು.

'ನಾನೇ ನಿಮ್ಮ ಮನೆಗೆ ಬರೋಣಾಂತ ಇದ್ದೆ. ನಿಮ್ಮ ಕುಮಾರ ಕಂಠೀರವ ಪ್ರಸಾದ 5–ಸ್ಟಾರ್ ಹೋಟೆಲ್ನ ಕಿಚನ್ನಲ್ಲಿ ಒಳ್ಳೆ ಕೆಲ್ಸ ಹೊಡ್ದ ಅಂತ ಎಲ್ಲಾರ ಬಾಯಲ್ಲಿ ಅವನ ಮಾತೆ.'

'ಅಯ್ಯೋ ಬಿಡಿ! ಅದ್ಯಾಕೆ ಹೇಳ್ತೀರ ಸೀತಮ್ಮ. ಈಗ ಎಲ್ಲಾರೂ ಅವನ್ನ ಹೊಗಳಿ ಹೊಗಳಿ ಅಟ್ಟಕ್ಕೆ ಏರಿಸೋವ್ರೆ! ಸ್ವಲ್ಪ ದಿವಸದ ಹಿಂದೆ ಅವನ್ನ ಎಲ್ರೂ ತೆಗಳ್ತಿದ್ರು! ಅವ್ನು ಯಾವುದಕ್ಕೂ ಪ್ರಯೋಜನ ಇಲ್ಲ..ಯೂಸ್ಲೆಸ್ ಅಂತ ಬಯ್ಯೋವ್ರು.'

'ಅಂಬುಜಮ್ಮ! 'ನಾಯಿ ಬೊಗಳಿದರೆ ದೇವಲೋಕ ಹಾಳಾಗುತ್ಯೆ?' ಬಿಡಿ, ಕಂಡವ್ರ ಮಾತು... ಮುಂಚೆ ಏನು ಮಾಡ್ತಿದ್ದ ನಿಮ್ಮಗ?'

'ಅವನು ಚಿಕ್ಕವನಾಗಿದ್ದಾಗ ಬೀದಿ ನಾಯಿಗಳ ಜೊತೆ ಆಟವಾಡ್ತಿರೋನು. ಆಡಿ ಮನೆಗೆ ಬಂದು ಅವುಗಳ್ಗೆ ಹಸಿವು... ಏನಾದ್ರೂ ಕೊಡು ಅಂತ ಪೀಡಿಸೊವ್ನು... ದಿನಾ ಏನಾದ್ರೂ ಮಾಡಕ್ಕೆ ಆಗೊಲ್ಲ ಅಂತ ಮದ್ಯೆ ಸ್ವಲ್ಪ ದುಡ್ಡು ಕೊಡ್ತಾ ಇದ್ದೆ.. ಎರಡು ಬ್ರೆಡ್ ತಂದು ಅವುಗಳನ್ನು ಸಣ್ಣ ಚೂರುಗಳು ಮಾಡಿ ಒಂದೊಂದಕ್ಕು ಎಸೆಯೋವ್ನು .. ಅವುಗಳು ಕ್ಯಾಚ್ ಹಿಡಿಯೋದು... ಒಂದನ್ನೂ ಕೆಳಗೆ ಬೀಳಿಸ್ದೆ ಚಕ್ ಅಂತ ಹಾರಿ ಹಿಡಿಯೋವು.. ಹತ್ತು ಹನ್ನೆರೆಡು ನಾಯಿಗಳಿಗೆ ಹೀಗೆ ಬ್ರೆಡ್ ಪೀಸ್ ಮಾಡಿ ಎಸೆಯೋವ್ನು. ಹತ್ತು ನಿಮಿಷದಲ್ಲಿ ಅವುಗಳ ಊಟ ಮುಗೀತಿತ್ತು'.

'ಆಶ್ಚರ್ಯ. ಆಮೇಲೇನಾಯ್ತು?'

'ಒಂದು ಸಲ ಅವನು ನಾಯಿಗಳಿಗೆ ಹೀಗೆ ಬ್ರೆಡ್ ಎಸೆದು ತಿನ್ನಿಸ್ತಿದ್ದಾಗ, ಅದನ್ನು ಕೆ ಎಸ್ ಸಿ ಎ ನ ಮಾಜಿ ಸೆಕ್ರೆಟರಿ ಆಗಿದ್ದ ಬ್ರಿಜೇಶ್ ಪಟೇಲ್ ನೋಡಿದ್ರು. ಅವ್ರು ಕಾರು ನಿಲ್ಲಿಸಿ, ಅವರ ಕಾರ್ಡು ಕೊಟ್ಟು, ಚಿನ್ನಸ್ವಾಮಿ ಸ್ಟೇಡಿಯಮ್ಗೆ ಬಂದು ನನ್ನ ನೋಡು ಅಂತ ಕರೆದ್ರು.'

'ಓ! ಹೌದಾ?'

'ಕರ್ನಾಟಕ ರಣಜಿ ಟ್ರೋಫಿ ಆಟಗಾರರು ಟೀಮ್ನವರು ಬಹಳ ಕ್ಯಾಚ್ ಬಿಡ್ತಾ ಇದಾರೆ, ಅದರಲ್ಲೂ ಸ್ಲಿಪ್ ಕ್ಯಾಚುಗಳು.... ಅದರಿಂದಲೇ ರಣಜಿ ಟ್ರೋಫಿಲಿ ಸೋಲ್ತಾ ಇದಾರೆ ಅಂತ ಪಟೇಲ್ಗೆ ಯೋಚನೆಯಾಗಿತ್ತು... ಪ್ರಸಾದನ ಹತ್ತಿರ ಕ್ಯಾಚ್, ಫೀಲ್ಡಿಂಗ್ ಪ್ರಾಕ್ಟೀಸ್ ಮಾಡಿಸಿದ್ರೆ ಒಳ್ಳೆದು ಅಂತ ಅವರ ಪ್ಲಾನು. ಅವನು ಸೇರಿಕೊಂಡ ವರ್ಷ ರಣಜಿ, ದುಲೀಪ್, ಇರಾನಿ ಕಪ್ ಎಲ್ಲಾದರಲ್ಲೂ ಕರ್ನಾಟಕ ಗೆದ್ದು ಆ ವರ್ಷ ಚಾಂಪಿಯನ್ ಆದರು. ಅವನ ಕೋಚಿಂಗ್ ಮೆಥೆಡ್ ಬೇರೆ ಎಲ್ಲಾ ಕೋಚ್ಗಿಂತ ವಿಭಿನ್ನವಾಗಿದೆ, ಬಹಳ ಚೆನ್ನಾಗಿದೆ ಅಂತ ಕೆ ಎಸ್ ಸಿ ಎ ಅವನಿಗೆ ಸ್ಪೆಷಲ್ ಪ್ರೈಜ್ ಕೊಟ್ಟು ಇಡೀ ವರ್ಷಕ್ಕೆ ಕಾಂಟ್ರಾಕ್ಟೂ ಕೊಟ್ಟರು. ಅವನಿಗೆ ರಾಜ್ಯೋತ್ಸವ ಪುರಸ್ಕಾರಾನೂ ಆಯ್ತು.'

' ಗ್ರೇಟ್ ! ಆ ತರಹ ಏನು ಟ್ರೈನಿಂಗ್ ಕೊಟ್ಟ ಅವರಿಗೆ, ಅಂಬುಜಮ್ಮ?'

'ಸ್ಲಿಪ್‌ನಲ್ಲಿ ಫೀಲ್ಡ್ ಮಾಡುವರಿಗೆ ಅವರಿಗೆ ಇಷ್ಟವಾದದನ್ನ ಎಸೆಯುತ್ತಾ ಬಂದ.'

'ಎಸೆಯುತ್ತಾ?'

'ಹೌದು. ಕೆ ಎಲ್ ರಾಹುಲ್ ಗೆ ದ್ರಾಕ್ಷಿ, ಗೋಡಂಬಿ ಹಾಕಿರೋ ಬೂಂದಿ ಲಾಡು ಅಂದ್ರೆ ಪ್ರಾಣ. ಅವನನ್ನು ಸ್ಲಿಪ್ ನಲ್ಲಿ ನಿಲ್ಲಿಸಿ, ಒಂದು ಬುಟ್ಟಿ ತುಂಬ 'ಎಮ್ ಟಿ ಆರ್' ನ ಲಾಡೂನ ಇಟ್ಟುಕೊಂಡು, ಒಂದೊಂದಾಗಿ ಫಾಸ್ಟಾಗಿ ನೆಲಕ್ಕೆ ಬೀಳುವ ಹಾಗೆ ಎಸೆಯುತ್ತಿದ್ದ ಪ್ರಸಾದ. ಅದನ್ನು ಒಂದು ಸಲವೂ ನೆಲಕ್ಕೆ ಬಿಡಲಿಲ್ಲ, ರಾಹುಲ್.  ಕರುಣ್ ನಾಯರ್‌ಗೆ ಕಲ್ಸಕ್ರೆ, ಬಾದಾಮಿ ಹಾಕಿದ ರವೆ ಉಂಡೆ ಇಷ್ಟ ಅಂತ ಅವರ ಮನೆಯವರಿಂದ ತಿಳಿದುಕೊಂಡು, ನಾಯರ್‌ನ ಎರಡನೇ ಸ್ಲಿಪ್ ಜಾಗದಲ್ಲಿ ನಿಲ್ಲಿಸಿ ಅವನ ಕಡೆಗೆ 'ಉಡುಪಿ ಕೃಷ್ಣ ಭವನ'ದಿಂದ ಕುಕ್ಕೆ ತುಂಬ ತಂದ ರವೆ ಉಂಡೆನ ಎಸೆಯುತ್ತಾ ಬಂದ ಪ್ರಸಾದ. ನೆಲಕ್ಕೆ ಡೈವ್ ಹೊಡೆದು, ಕಾಲಿಗೆ ಗಾಯ ಮಾಡಿಕೊಂಡ್ರೂ ಸರಿ, ಒಂದನ್ನೂ ಬಿಡಲಿಲ್ಲ ಕರುಣ್ ನಾಯರ್.'

'ಹೌದೇನ್ರಿ ಅಂಬುಜಮ್ಮ!'

'ಹೌದು. ಮುಂದೆ ಕೇಳಿ. ಸ್ಟುವರ್ಟ ಬಿನ್ನಿಗೆ ಸೇಬು ಮತ್ತು ದಾಳಿಂಬೆ ಅಂದರೆ ಹುಚ್ಚಂತೆ. ಅದಕ್ಕೆ ಅದನ್ನು ಅವನ ಫಾರ್ಮನಲ್ಲಿ ಬೆಳಸ್ತಾನೆ ಅಂತ ಗೊತ್ತಾಗಿ, ಬಿನ್ನಿಯನ್ನು ಕವರ್ಸ್ ಜಾಗದಲ್ಲಿ ನಿಲ್ಲಿಸಿ, ಬ್ಯಾಟ್ಸ್ಮನ್ ಆಡುವ ಜಾಗದಿಂದ ಪ್ರಸಾದ ಒಂದು ಗೋಣಿಚೀಲದ ತುಂಬ 'ಸೈಯದ್ ಶಕೀಲ್ ಎಕ್ಸ್ಪೋರ್ಟರ್ಸ್' ಕಂಪನಿಯ ಹಣ್ಣುಗಳನ್ನಿಟ್ಟುಕೊಂಡು ವೇಗವಾಗಿ ಎಸೆಯುತ್ತಾ ಬಂದ. ಬಿನ್ನಿ ಎರಡೂ ಕಡೆಗೆ ಡೈವ್ ಮಾಡಿ, ಬಿದ್ದು ಒಂದನ್ನೂ ಬಿಡದೆ ಹಣ್ಣುಗಳನ್ನು ತಡೆದು ನಿಲ್ಲಿಸುತ್ತಾ ಬಂದ. ಬೌಂಡರಿ ಹೋಗುವ ಆಪಲ್, ದಾಳಿಂಬೆ ಹಣ್ಣು ಒಂದನ್ನೂ ಬಿಡದೆ ಬಿನ್ನಿ ಎಲ್ಲವನ್ನೂ ಅಲ್ಲೆ ತಡೆಹಾಕಿದ.'

'ಅದ್ಭುತ.'

'ಫೀಲ್ಡಿಂಗ್ ಆದ ಮೇಲೆ ಪ್ರಸಾದ ಲಾಡು, ಸೇಬು ಎಲ್ಲಾ ಆ ಫೀಲ್ಡರ್ಸ್ ಗೇ ಬಹುಮಾನವಾಗಿ ಕೊಟ್ಟ. ಇದು ಅವರೆಲ್ಲರಿಗೂ ಬಹಳ ಇಷ್ಟವಾಯ್ತು..'

'ಅಲ್ವೇ ಮತ್ತೆ, ಕೈ ಕೆಸರಾದರೆ, ಬಾಯಿ ಮೊಸರಲ್ವೇ! ಜೊತೆಗೆ ಎಲ್ಲಾ ಟೂರ್ನಮೆಂಟು ಬೇರೆ ಗೆದ್ರು.'

'ಐ ಪಿ ಎಲ್ ಗೆ ಬಂದಿದ್ದ ವಿರಾಟ್ ಕೊಹ್ಲಿ ಒಂದು ಸಲ ಇವನ ಕೋಚಿಂಗ್ ಪ್ರಾಕ್ಟಿಸ್ ನೋಡಿ ಮೆಚ್ಚಿ ಅವನ ಸಲಹೆಯ ಮೇರೆಗೆ ಬಿಸಿಸಿಐ ಯಿಂದ ಮುಂದಿನ ವರ್ಷ ಇಂಗ್ಲೆಂಡಿನಲ್ಲಿ ನಡೆಯುವ ಒಡಿಐ ವರ್ಲ್ಡ್ ಕಪ್‌ಗೆ ಪ್ರಸಾದ ಹೋಗ್ತಾ ಇದಾನೆ. ಒಂದು ತಿಂಗಳು ಪ್ರಸಾದ ಭಾರತದ ಟೀಮಿಗೆ ಕ್ಯಾಚು, ಫೀಲ್ಡಿಂಗ್ ಟ್ರೈನಿಂಗ್ ಕೊಡ್ತಾನೆ. ಅವನ ಜೊತೆ ನಾಲ್ಕು ಅಡುಗೆಯವರೂ ಹೋಗುತ್ತಿದ್ದಾರೆ. ಅವರು ಅಡುಗೆ ಮಾಡಲ್ಲ! ಬರೀ ಫೀಲ್ಡಿಂಗ್, ಕ್ಯಾಚಿಂಗ್‌ಗೆ ಬೇಕಾದ ತರಪೇತಿ ತಿಂಡಿಗಳು ಅಲ್ಲಿ ಮಾಡ್ತಾರೆ! ಪ್ರಸಾದ ಈಗಿನಿಂದಲೇ ಇಂಗ್ಲೆಂಡಿಗೆ ಹೋಗುವುದಕ್ಕೆ ತಯಾರಿ ಮಾಡ್ತಿದಾನೆ.'

'ಈಗ್ಲಿಂದಾನೇ? ಇಷ್ಟು ಬೇಗ!'

'ವಿರಾಟ್ ಕೊಹ್ಲಿ ಮತ್ತು ಅವನ ಹೆಂಡತಿ ಇಬ್ಬ್ರಿಗೂ ಅಲೂ ಸಮೋಸ ಇಷ್ಟವಂತೆ. ಅಜಿಂಕ್ಯಾ ರಹಾನೆಗೆ ಬಟಾಟ ವಡ, ರವಿಚಂದ್ರನ್ ಅಶ್ವಿನ್ಗೆ ಬಾದುಷ

ಇತ್ಯಾದಿ.. ಹೀಗೆ ಅವರ ಇಷ್ಟದ ತಿಂಡಿಗಳನ್ನು ಸಂಗ್ರಹ ಮಾಡಿ, ಕೋಚ್ ರವಿ ಶಾಸ್ತ್ರಿಯ ಜೊತೆಗೆ ಕೂತು ಕ್ಯಾಚಿಂಗ್–ಫೀಲ್ಡಿಂಗ್ ಪ್ಲಾನ್ ಮಾಡಬೇಕು. ಇದನ್ನೆಲ್ಲಾ ತಯಾರಿ ಮಾಡಕ್ಕೆ ಟೈಮ್ ಆಗುತ್ತೆ ಅಂತಾನೆ.'

'ವ್ಹಾ ! ಪ್ರಸಾದನಿಗೆ 5– ಸ್ಟಾರ್ ಹೋಟೆಲ್‌ನಲ್ಲಿ ಕೆಲಸ ಸಿಕ್ಕಿದೆ ಅಂತ ಕೇಳಿದೆ?'

'ಅದೂ ನಿಜ. ಟೆಕ್ನಾಲಜಿಯ ಬಳಕೆ ನಮ್ಮ ನಿತ್ಯ ಜೀವನದಲ್ಲಿ ಬರ್ತಾ ಇದೆ. ಆವಾಗಲೇ ರೊಬೊ ಬಹಳ ಕಡೆ ಬಂದು ಅವುಗಳೇ ಟ್ರೇಲಿ ತಿಂಡಿ, ತೀರ್ಥ ಹಿಡಕೊಂಡು ಬಂದು ಸರ್ವ್ ಮಾಡ್ತಾ ಇದೆ. ಪ್ರಸಾದ ಒಂದು ಸ್ಟಾರ್ಟಪ್ ಕಂಪನಿಯಲ್ಲಿ ಡ್ರೋನ್ಸ್‌ನ್ನ ಹೋಟೆಲ್‌ಗಳಲ್ಲಿ ಹೇಗೆ ಉಪಯೋಗಿಸಬೇಕೆಂದು ರಿಸರ್ಚ ಮಾಡ್ತಾ ಇದಾನೆ.. ಬೇಸಿಗೆಯಲ್ಲಿ ಬಹಳ ಜನ ಹೋಟೆಲ್ಲಿಗೆ ಬರುತ್ತಾರೆ. ವಿದೇಶದಿಂದಲೂ ಬಹಳ ಟ್ಯೂರಿಸ್ಟುಗಳು ಬರ್ತಾರೆ... ಬೆಳಿಗ್ಗೆ ಬ್ರೆಕ್‌ಫಾಸ್ಟಿನ ಹೊತ್ತಿಗೆ ಬಹಳ ರಷ್ ಇರುತ್ತೆ. ಅದಕ್ಕೆ ಕಸ್ಟಮರ್ಸ್ ಕೂತಿರುವ ಕಡೆಗೆ ಅವರ ತಟ್ಟೆಗೆ ಹೋಗಿ ಬೀಳುವ ಹಾಗೆ ಅಡುಗೆ ಮನೆಯಿಂದ ಪ್ರಸಾದ ಇಡ್ಲಿ, ದೋಸೆ, ಪ್ಯಾನ್ ಕೇಕುಗಳನ್ನು ಡ್ರೋನ್ಸ್ ಗೆ ಲೋಡ್ ಮಾಡಿ ಅದು ಆಯಾ ಟೇಬಲ್ ಗೆ ಹೋಗಿ ಅಲ್ಲಿ ತಟ್ಟೆಗೆ ಸರಿಯಾಗಿ ಹಾಕಿ ಬರೋದಕ್ಕೆ ರೆಡಿ ಮಾಡ್ತಿದಾನೆ. ದೋಸೆ, ಇಡ್ಲಿ ಅವುಗಳ ಗಾತ್ರ, ಅಳತೆ, ತೂಕ ಎಲ್ಲಾ ಸ್ಟಾನ್ಡರಡ್ ಮಾಡಬೇಕಂತೆ; ಚಟ್ನಿ, ಸಾಂಬಾರ್, ಚಟ್ನಿ ಪುಡಿಗಳು ಮತ್ತೆ ಬೇಕಾದ್ರೆ ಮಿನಿ ಡ್ರೋನ್ಸ್‌ಗಳು ಸೀದಾ ತಟ್ಟೆಗೆ ಹೋಗಿ ಅದನ್ನು ಸುರಿದು/ ಉದುರಿಸಿ ಬರುತ್ತೆ. ಎಲ್ಲರಿಗೂ ಸರಿಯಾಗಿ ಅಡುಗೆ ಮನೆಯಿಂದ ಆಯಾ ಟೇಬಲ್ಲಿನ ತಟ್ಟೆಗೆ ಹಾಕುವುದಕ್ಕೆ ಸಾಫ್ಟ್‌ವೇರ್ ಮಾಡಿ ಎಲ್ಲಾ ವೈಟರ್ಸಗೆ ಟ್ರೈನಿಂಗ್ ಕೊಡ್ತಿದಾನೆ ಪ್ರಸಾದ.'

'ಈ ತರಹದ ಟೆಕ್ನಾಲಜಿ ಬೇರೆ ಎಲ್ಲಾದ್ರೂ ಉಪಯೋಗಕ್ಕೆ ಬರಬಹುದಂತಾ?'

'ಮಳೆ, ಬಿರುಗಾಳಿ, ಸುನಾಮಿ, ಭೂಕಂಪದಲ್ಲಿ ಸಿಕ್ಕಿ ಹೊಟ್ಟೆಗೆ ಏನೂ ಸಿಕ್ಕದೆ ಯಾವುದಾದರೂ ಕ್ಯಾಂಪಿನಲ್ಲಿದ್ದ ಆಶ್ರಿತರಿಗೆ ಇದು ಉಪಯೋಗಕ್ಕೆ ಬರಬಹುದು. ನಿಂತಿದ್ದ ಜಾಗದಿಂದೇ ಏನು ಬೇಕಾದ್ರೂ ಕಳಿಸಬಹುದಂತೆ. ದೇವಸ್ಥಾನದಲ್ಲಿ ಬಹಳ ಜನರಿದ್ದರೆ ಕುಂಕುಮ, ವಿಭೂತಿ, ತೀರ್ಥ, ಹೂವನ್ನು ಡ್ರೋನ್‌ನಲ್ಲಿಟ್ಟು ಅದನ್ನು ಒಂದು ರೌಂಡ್ ಕಳಿಸಿ ಎಲ್ಲರ ಮೇಲೂ ಬೀಳುವ ಹಾಗೆ ಮಾಡಬಹುದು ಅಂತಾನೆ. ಬರೋ ಸೋಮವಾರ ಇದನ್ನು ಶಂಕರ ಮಠದ ದೇವಸ್ಥಾನದಲ್ಲಿ ಟ್ರೈಯಲ್ ಇಟ್ಕೊಂಡಿದಾನೆ'.

'ಅಂಬುಜಮ್ಮ... ನನಗೇನೋ ಪೂಜೆಯಾದ ಮೇಲೆ ಕೊಡುವ ದೇವರ ಪ್ರಸಾದವನ್ನು ಡ್ರೋನ್ಸ್‌ನಿಂದ ಕಳಿಸೋದು ಚೆನ್ನಾಗಿರಲ್ಲ ಅಂತ ಅನ್ಸುತ್ತೆ.. ನೀವೇನು ಹೇಳ್ತೀರ?'

'ನಾನು ಅವನನ್ನು ಇದೇ ಪ್ರಶ್ನೆ ಕೇಳಿದೆ... ಅವ್ನೂ ಒಪ್ಕೊಂಡ... ಹಾಗೆ ಕಳಿಸೋದು ಸರಿಯಿಲ್ಲ ಅಂದ'.

'ಮತ್ತೆ ಹೂವ್ನ ಹೇಗೆ ಕೊಡ್ತಾನಂತೆ?'

'ದೂರದಲ್ಲಿ ನಿಂತುಕೊಂಡು ಒಂದೊಂದಾಗಿ ಅಲ್ಲಿದ್ದವರ ಕೈಗೆ ಹೋಗುವ ಹಾಗೆ ಎಸೀತೀನಿ' ಅಂದ.

- ದಂನಆ

- ✓ ಆ್ಯಪಲ್ ಮತ್ತು ಸ್ಟ್ರಾಬೆರಿ ಬರೀ ಹಣ್ಣುಗಳಾಗಿದ್ದಾಗ ಬದುಕು ಸರಳವಾಗಿತ್ತು.
- ✓ ಆಹಾರವನ್ನು ಡೌನ್‌ಲೋಡ್ ಮಾಡಿಕೊಳ್ಳಲು ಸಾಧ್ಯವಾದಾಗ ಮಾತ್ರ ನಾನು ತಂತ್ರಜ್ಞಾನವನ್ನು ಮೆಚ್ಚತೊಡಗುತ್ತೇನೆ.
- ✓ ನಾನು ಸೌಮ್ಯವಾಗಿ ನಿನಗೆ ಕಾಣುತ್ತಿರಬಹುದು. ಆದರೆ ನಾನು ಈಗಾಗಲೇ ನನ್ನ ಮನಸ್ಸಿನಲ್ಲಿ ನಿನ್ನನ್ನು ಮೂರು ಬಾರಿ ಕೊಂದಿದ್ದೇನೆ.
- ✓ ವಾಟ್ ಡು ಯು ಗೆಟ್ ವೆನ್‌ಯು ಕಟ್ ಎ ಕಮೇಡಿಯನ್ ಇನ್ ಟು? ಎ ಹಾಫ್-ವಿಟ್
- ✓ ಪ್ರಚಾರ ಜನರನ್ನು ಮೋಸ ಮಾಡುವುದಿಲ್ಲ. ಮೋಸ ಹೋಗುವುದಕ್ಕೆ ಅದು ನೆರವಾಗುತ್ತದೆ ಅಷ್ಟೆ.
- ✓ ಬುದ್ಧಿವಂತಿಕೆ ಕೊಳ್ಳಲು ಮೂರ್ಖನಿಗೆ ಹಣದ ಅವಶ್ಯಕತೆ ಇರದು.
- ✓ ಯು ಕೆನಾಟ್ ರಿಪ್ಲೇಸ್ ಎ ಪರ್ಸನ್.
- ✓ ಬದುಕಿಗೆ ಕೈಗಳು ಇರದು. ಆದರೆ ಆಗಾಗ್ಗೆ ಅದು ರಪ್ಪೆಂದು ಬಾರಿಸುತ್ತದೆ.
- ✓ 'ಮುಂದೇನು ಆಗುತ್ತೀರಿ?' ಎಂದು ಮಕ್ಕಳನ್ನು ಪದೇಪದೇ ಕೇಳಲು ನನಗೆ ಆಸೆ. ಏಕೆಂದರೆ, ನಾನೇನು ಆಗಬೇಕು ಎಂಬುದಕ್ಕೆ ನನಗಿನ್ನೂ ಐಡಿಯಾಗಳು ಬೇಕಾಗಿವೆ.
- ✓ ದಿ ಬೆಸ್ಟ್ ಎಂಡ್ ಆಫ್ ಎ ಡ್ರಿಂಕ್ ಈಸ್ ಇನ್ ದಿ ಗ್ಲಾಸ್, ನಾಟ್ ಇನ್ ದಿ ಬಾಟಲ್.
- ✓ ಇತರರ ಒಪ್ಪಿಗೆಗಾಗಿ ಸತ್ಯ ಎಂದಿಗೂ ಕಾದು ಕುಳಿತಿರುವುದಿಲ್ಲ.
- ✓ ಕಷ್ಟದಲ್ಲಿರುವವರಿಗೆ ಸಹಾಯ ಮಾಡಿ. ಅವರು ನಿಮ್ಮನ್ನು ನೆನಪಿಸಿಕೊಳ್ಳುತ್ತಾರೆ – ಮತ್ತೆ ಅವರು ಕಷ್ಟದಲ್ಲಿರುವಾಗ.
- ✓ ನೀವು ಬಿದ್ದಾಗ ನಾನು ಅಲ್ಲಿ ಇದ್ದೇ ಇರುತ್ತೇನೆ – ನೆಲ.
- ✓ ಇಫ್ ಯು ಕೆನಾಟ್ ಲಾಫ್ ಅಟ್ ಯುವರ್‌ಸೆಲ್ಫ್, ಕಾಲ್ ಮಿ– ಐ ವಿಲ್ ಲಾಫ್ ಅಟ್ ಯು.
- ✓ ಬದುಕಿಗೆ ಹಿನ್ನೆಲೆ ಸಂಗೀತ ಇರಬೇಕಿತ್ತು. ಆಗ ಏನಾಗುತ್ತಿದೆ ಎಂಬುದು ಗೊತ್ತಾಗುತ್ತಿತ್ತು.
- ✓ ನಾನು ಸತತವಾಗಿ ಎರಡು ದಿನ ಫೇಸ್‌ಬುಕ್‌ನಲ್ಲಿ ಕಾಣಿಸಿಕೊಳ್ಳದಿದ್ದರೆ ಪೊಲೀಸರಿಗೆ ದೂರು ಕೊಡಿ. ನನ್ನನ್ನು ಯಾರೋ ಅಪಹರಿಸಿರುತ್ತಾರೆ.

ಕಾಮನ್ ರೂಮ್ ಕಹಾನಿ

# ಹೀಗೊಂದು ಮದುವೆ

**– ಗಣೇಶ ಹೆಗ್ಗಡೆ**

'ಸಾಮಾನ್ಯವಾಗಿ ಮದುವೆ ಸಮಾರಂಭಗಳಲ್ಲಿ ಭಾಗವಹಿಸುವುದು ಅಂದರೆ ಏನೋ ಮನಸ್ಸಿಗೆ ಉಲ್ಲಾಸ, ಆಹ್ಲಾದಕರ' ಎನ್ನುವ ಭಾವನೆ ನಮ್ಮ ನಿಮ್ಮೆಲ್ಲರದು. ಆದರೆ ಇತ್ತೀಚೆಗೆ ನನಗೆ ಮತ್ತು ನನ್ನ ಮಡದಿ ಪದ್ದಿಗೆ ಆದ ವಿಚಿತ್ರ ಅನುಭವ ಹಾಗೂ ಆಘಾತದ ವಿಚಾರವನ್ನು ನೀವು ಕೇಳಿದರೆ ಖಂಡಿತಾ ಬೆಚ್ಚಿ ಬೀಳುತ್ತೀರಿ. ನಾನು (ನನ್ನ ಮಡದಿ ಪದ್ದಿಯ ಮುಂದೆ ಹೊರತು ಪಡಿಸಿ) ಎಲ್ಲಾ ಕಾಲಕ್ಕೂ ಸತ್ಯವನ್ನೇ ಹೇಳುತ್ತೇನೆ. ಸತ್ಯವನ್ನೇ ಹೇಳುತ್ತೇನೆ, ಸತ್ಯವನ್ನಲ್ಲದೆ ಬೇರೇನೂ ಹೇಳುವುದಿಲ್ಲ ಮಹಾಸ್ವಾಮಿ–

ಮೊನ್ನೆ ಅಂದರೆ ಪಿತೃಪಕ್ಷಕ್ಕಿಂತ ತುಸು ಮುಂಚೆ ಪದ್ದಿ ಮತ್ತು ನಾನು, ಒಂದು ಮದುವೆಗೆ ಹೋಗಲೇಬೇಕಾದ ಅನಿವಾರ್ಯತೆ ಬಂತು. ಈ ಮದುವೆ, ನನ್ನಾಕೆಯ ಗೆಳತಿಯ ಕೊನೆಯ ತಮ್ಮನ್ನದ್ದು. ಒಂದ್ವಾರದ ಕೆಳಗೆ ಅವರು ಪದ್ದಿಗೆ ಫೋನಾಯಿಸಿ 'ಟೈಮು ಷಾರ್ಟಿದೆ' ಇನ್ವಿಟೇಷನ್ ಪೋಸ್ಟ್ ಮಾಡುವುದಕ್ಕೆ ಆಗ್ತಾಯಿಲ್ಲ, ಇದು ಫ್ಯಾಮಿಲಿಯ ಕೊನೆಯ ಮದುವೆ, ತಪ್ಪದೆ ನಿಮ್ಮೆಜಮಾನರ ಜತೆ ಬಾ' ಎಂದು ಆಹ್ವಾನಿಸಿ, ಛತ್ರದ ಅಡ್ರೆಸ್ಸು ಹಾಗೂ ಮದುವೆಯ ದಿನಾಂಕವನ್ನು ತಿಳಿಸಿದ್ದರು. ವರಪೂಜೆಗೇ ಹೋಗೋಣವೆಂದು ನಿರ್ಧರಿಸಿದ ನಾವು ಛತ್ರದ ಬಾಗಿಲಿಗೆ ಬಂದಾಗ, ಅಲ್ಲಿ ಅರಿಶಿನ, ಕುಂಕುಮ, ಹೂವಿನ ತಟ್ಟೆ ಹಿಡಿದು ನಿಂತಿರುವ ಯಾವ ಸ್ವಾಗತಕಾರಿಣಿಯೂ ಕಾಣದೆ ಕೊಂಚ ಕಸಿವಿಸಿಗೊಂಡಳು ಸಂಪ್ರದಾಯಸ್ಥಳಾದ ಪದ್ದಿ.

'ಬ್ಯಾಡಾ ಕಣೆ, ಮುಂದಿನ ಸಾಲಿನಲ್ಲಿ ಕುಳಿತುಕೊಳ್ಳೋಕೆ ನನ್ಗೆ ಸಂಕೋಚವಾಗುತ್ತೆ, ಹಿಂದೆಯೆ ಕೂರೋಣ' ಎಂದು ಎಷ್ಟು ಅಲವತ್ತು ಕೊಂಡರೂ, ನೀವೊಬ್ಬರು ಮಖೇಡಿ ಎಂದು ಯಾರಿಗೂ ಕೇಳಿಸದಂತೆ ಬೈದು, ಮುಂದಿನ ಸಾಲಿಗೇ, ನನ್ನನ್ನು ಕರೆದೊಯ್ದಳು. ಅಲಂಕೃತ ಮದುವೆ ಮಂಟಪದತ್ತ ಕಣ್ಣು ಹಾಯಿಸಿದೆ. ಹಸೆ ಮಣೆ ಮೇಲೆ ತಂದೆ–ತಾಯಿ ಹಾಗೂ ವರ ಆಗಲೇ ಕುಳಿತಿದ್ದರು. ಮಂಟಪದ ಸುತ್ತಾ ಮುತ್ತಾ ಹೆಂಗಸರ ಓಡಾಟ ವಿರಳವಾಗಿದ್ದನ್ನು ಗಮನಿಸಿದ ನಾನು 'ಇದೇನು ವಿಚಿತ್ರ? ಎಲ್ಲೂ ಪುರೋಹಿತರೇ ಕಾಣ್ತಾಯಿಲ್ಲ, ಮಂತ್ರಗಳ ಶಬ್ದವೇ ಇಲ್ಲ. ಇದೇ ಛತ್ರ ತಾನೆ ನಾವು ಬರ್ಬೇಕಾಗಿದ್ದು?' ಎಂದು ಕೇಳಿ ಪದ್ದಿಯಿಂದ ಮತ್ತೆ ಬೈಸಿಕೊಂಡೆ. ನಿರ್ವಾಹವಿಲ್ಲದೆ ಪಕ್ಕಕ್ಕೆ ಹೊರಳಿದೆ. ಅಲ್ಲಿ ಪಕ್ಕದ ಕುರ್ಚಿಯಲ್ಲಿ ನನಗಿಂತಲೂ ವಯಸ್ಸಾದವರಂತೆ ಕಾಣುತ್ತಿದ್ದ ಹಿರಿಯರೊಬ್ಬರು ಒಂಟಿ ಕುಳಿತಿದ್ದರು. ಅವರ ಕೆಂಪು ಕಣ್ಣು, ಹುಬ್ಬು ಗಂಟಿಕ್ಕಿದ ಮುಖಕಂಡು ಕೊಂಚ ದಿಗಿಲಾದರೂ ಧೈರ್ಯ ವಹಿಸಿ,

'ಸ್ವಾಮಿ ವರಪೂಜೆ ಲೇಟೆ? ಪುರೋಹಿತರಿಗಾಗಿ ಕಾಯ್ತಾ ಇದ್ದಾರೆಯೆ?' ಎಂದು ಮುಗ್ಧತೆಯಿಂದ ಕೇಳಿದೆ. ಅಪಾದ ಮಸ್ತಕ ನನ್ನನ್ನು ನೋಡಿದ ಅವರು,

'ಆಗಲೇ ಶುರುವಾಯ್ತಲ್ಲ ಸ್ವಾಮಿ, ಈ ಮದುವೆಗೆ ಪುರೋಹಿತರು ಬರ್ತಾಯಿಲ್ಲ, ಅವರ ಅವಶ್ಯಕತೆಯೂ ಇಲ್ಲಿಲ್ಲ, ಎಂದು ಸಿಡಿಮಿಡಿಗೊಂಡು ಹೇಳಿದರು.

'ಅಂದ್ಹಾಗೆ, ಸ್ಟೇಜಿನ ಮೇಲೆ ಐದಾರು ಜನ ಗಂಡಸರು, ಕಪ್ಪು ಪ್ಯಾಂಟು, ಕಪ್ಪು ಕೋಟು, ಬಿಳಿ ಟೈ ಹಾಕಿಕೊಂಡು ಕೈಯಲ್ಲಿ ರಿಜಿಸ್ಟರುಗಳನ್ನು ಹಿಡಿದು ನಿಂತಿದ್ದಾರಲ್ಲ... ಅವರ್‍ಯಾರು?'

'ಅವರೆಲ್ಲಾ ಲಾಯರುಗಳು'

'ಲಾಯರುಗಳೆ? ಅಂತಂದ್ರೆ ಹುಡುಗನ ಕಡೆ ನೆಂಟರೆ?

'ಇಲ್ಲ, ಇವರನ್ನೆಲ್ಲಾ ಈ ಮದುವೆಗೆಂದೇ ಸ್ಪೆಷಲ್ಲಾಗಿ ಕರೆಸಲಾಗಿದೆ.

'ಅರ್ಥವಾಯ್ತು ಬಿಡಿ'

'ಏನ್ರೀ ಅರ್ಥವಾಯ್ತು?'

'ಸಾವಿರ ಸುಳ್ಳು ಹೇಳಿ ಒಂದು ಮದುವೆ ಮಾಡಿಸು' ಎಂಬ ಗಾದೆ ಮಾತಿನ ಸಾರ್ಥಕ್ಯಕ್ಕಾಗಿ ಹೀಗೆ ಲಾಯರುಗಳನ್ನು ಕರೆಸಲಾಗಿದೆ ಅಂತನ್ನುತ್ತೆ. ಪ್ರತಿಯೊಬ್ಬರು ತಲಾ ಇನ್ನೂರು ಸುಳ್ಳುಗಳನ್ನು ಹೇಳಿದರೂ ಗಾದೆ ಸತ್ಯವಾಗಿ ಬಿಡುತ್ತೆ.

'ಪರವಾಗಿಲ್ಲ ಚೆನ್ನಾಗೇ ಗೇಲಿ ಮಾಡ್ತೀರಿ ಕಣ್ರಿ ನಿಮಗೆ ವಯಸ್ಸಿಗೆ ತಕ್ಕ ಮೆಚ್ಯೂರಿಟೀನೆ ಇಲ್ಲ' ಈ ಮದುವೆ ಬಗ್ಗೆ ಸೀರಿಯಸನೆಸ್ಸೇ ಇಲ್ಲ'

'ಕೊಂಚ ಬಿಡಿಸಿ ಹೇಳಿ ಸ್ವಾಮಿ'

'ಮುಂದೆ ಸೀರಿಯಸ್ಸಾಗಿ ಅಬ್ಸರ್ವ್ ಮಾಡಿ, ಇವತ್ತು ಎರಡು ವರಪೂಜೆ ನಡೆಯುತ್ತೆ'

'ವ್ಹಾಟ್? ಒಂದೇ ವರನಿಗೆ ಎರಡು ವರ ಪೂಜೆಯೆ?

'ಹ್ಞೂಂ ಸ್ವಾಮಿ, ಆದ್ರೆ ಒಂದೇ ವರನಿಗಲ್ಲ' ಅಂದ್ಹಾಗೆ ನೀವು ಇನ್ವಿಟೇಷನ್ನೇ ಸರಿಯಾಗಿ ಓದಿಲ್ಲಾ ಅಂತಾಯ್ತು?

'ನಮ್ಗೆ ಇನ್ವಿಟೇಷನ್ನೇ ಬಂದಿಲ್ಲ ಸ್ವಾಮಿ'

'ಹೋ...ನೀವು ಆ ಪೈಕಿ/ಯವರೊ'

'ಛೆ...ಛೆ ಅಪಾರ್ಥ ಮಾಡ್ಕೊಬ್ಯಾಡಿ ಸ್ವಾಮಿ' ನಾವು ಫೋನ್ ಆಹ್ವಾನಿತರು. ಈ ಮದುವೆ ಹುಡುಗನ ಅಕ್ಕ, ನಮ್ಮ ಮನೆಯವರ ಕ್ಲಾಸ್‌ಮೇಟು'

'ಕಾಲ ಕೆಟ್ಟುಹೋಗಿದೆ ನೋಡಿ ಸುಮ್ ಸುಮ್ನೆ ಯಾರ್‍ಯಾರ ಮೇಲೊ ಅನುಮಾನ ಹುಟ್ಕೊಳ್ಳುತ್ತೆ.. ನಿಮ್ಗೆ ಬ್ರೀಫ್ ಆಗಿ ಹೇಳ್ಬಿಡ್ತೀನಿ ಕೇಳಿ. ಈ ಹುಡುಗನಿಗೆ ವಸ್ತ್ರ, ಉಡುಗೊರೆ ಕೊಟ್ಟು ಆರತಿ ಎತ್ತಿದ ಬಳಿಕೆ ಮತ್ತೊಬ್ಬ ವರ

ಮಹಾಶಯ ಬಂದು ಹಸೆ ಮಣೆ ಮೇಲೆ ಕೂತ್ಕೊತಾನೆ. ಅವನಿಗೂ ಇದೇ ಪ್ರೊಸೀಜರ್ರು ರಿಪೀಟ್ ಆಗುತ್ತೆ.

'ವ್ಹಾಟ್? ಒಂದು ಹುಡುಗಿಗೆ ಇಬ್ಬರು ವರಗಳೆ?' ಅದೂ ಈ ಲಾಯರುಗಳ ಸಮಕ್ಷಮದಲ್ಲಿ. ಇದು ಕಾನೂನಿಗೆ ವಿರೋಧವಾಗುಲ್ವೆ?

'ಕೂಲ್‌ಡೌನ್ ಮಹಾಸ್ವಾಮಿ. ಅದಕ್ಕೇ ನಾನು ಮುಂಚೆಯೆ ಕೇಳಿದ್ದು, ನೀವು ಇನ್ವಿಟೇಷನ್ನ್‌ನ್ನು ಗಮನಿಸಿಲ್ಲಾಂತ. ನಿಮ್ಮ ಬ್ರೈನು ಎಲ್ಲಿಂದ ಎಲ್ಲಿಗೊ ಹೊರಳುತ್ತಿದೆ. ಇಲ್ಲಿ ಹುಡುಗಿ ಐ ಮೀನ್ ವಧುವಿನ ಪಾತ್ರವೇ ಇಲ್ಲ. ಬದಲಿಗೆ ಮದುವೆಯಾಗ್ತಿರೋದು ಇಬ್ಬರ ಹುಡುಗರ ನಡುವೆ. ' ಆ ಹಿರಿಯರ ವಿವರಣೆ ಕೇಳಿ ನಾನೂ ಮತ್ತು ಪದ್ದಿ ಏಕಕಾಲಕ್ಕೆ ಬೆಚ್ಚಿಬಿದ್ದು ಯಾರಿಗೂ ಕಾಣದಂತೆ ಬೆವರಿನ ಸೆಲೆಯನ್ನು ಕರ್ಚೀಫಿನಿಂದ ವರೆಸಿಕೊಂಡೆವು. ನನಗೆ ಈ ಮದುವೆ ಬಗ್ಗೆ ಇನ್ನಷ್ಟು ಕುತೂಹಲ ಮೂಡಿ ಆ ಹಿರಿಯರತ್ತ ಹೊರಳಿ,

'ಈ ಮದುವೆ ಮುಂದೆ ಹೇಗೆ ನೆರವೇರುತ್ತೆ?' ಎಂದು ಕೇಳಿದೆ.

'ಬೆಳಿಗ್ಗೆ ಮುಹೂರ್ತದ ವೇಳೆಗೆ ಇಬ್ಬರು ಹುಡುಗರೂ ಹಾರ ಬದಲಾಯಿಸಿಕೊಂಡು, ಉಂಗುರ ವಿನಿಮಯ ಮಾಡ್ಕೋತಾರೆ'

'ಮತ್ತೆ ಕಾಶೀಯಾತ್ರೆ?

'ಇಬ್ಬರಿಗೂ ಸಪರೇಟಾಗಿರುತ್ತೆ'

'ಇನ್ನು ಗೌರಿ ಪೂಜೆ?'

'ಅದೆಲ್ಲಂತು? ಬದಲಿಗೆ ಗಣಪತಿ ಪೂಜೆಯನ್ನು ವರಗಳು ಅವರವರ ರೂಮಿನಲ್ಲಿ ಸಪರೇಟಾಗಿ ಮಾಡಿಕೊಳ್ಳುವುದು ಎಂದು ನಿರ್ಧರಿಸಿರುತ್ತೆ.

'ಅಂತರ್‌ಪಟ, ಧಾರೆ, ಮಾಂಗಲ್ಯಧಾರಣೆ ಇತ್ಯಾದಿ?'

'ಅವೆಲ್ಲಾ ಕ್ಯಾನ್ಸಲ್ ಮಾಡಲಾಗಿದೆ'

'ಮತ್ತೆ, ಪ್ರಮುಖವಾಗಿರೊ ಸಪ್ತಪದಿ?'

'ಗುಡ್ ಈಗ ಮೇಜರ್ ವಿಷ್ಯಕ್ಕೆ ತಾವು ಬಂದ್ರಿ'

'ಸಪ್ತಪದಿ ಬದಲು ಅಫಿಡವಿಟ್ಟು, ಅಗ್ರಿಮೆಂಟು, ಸ್ಥಳದ ಚೆಕ್‌ಬಂದಿ, ಮಹಜರು ಇತ್ಯಾದಿಗಳನ್ನು ಲಾಯರುಗಳು ನಡೆಸಿಕೊಡ್ತಾರೆ'

'ಹ್ಲಾಂ, ಮಹಜರ್ರೇ?

'ಹ್ಞೂಂ ಸ್ವಾಮಿ, ನಾಳೆ ಸಂಸಾರದಲ್ಲಿ ಏನಾದ್ರು ಯಡವಟ್ಟಾದರೆ ಕೋರ್ಟಿನಲ್ಲಿ ಸಾಕ್ಷಿ ಬೇಕಲ್ಲ, ಅದಕ್ಕೇ ಲಾಯರುಗಳನ್ನು ಇಲ್ಲಿ ಕರೆಸಿರುವುದು. ಇನ್ನೇನು ಮಹಜರು ಪ್ರಕ್ರಿಯೆ ಪ್ರಾರಂಭವಾಗುತ್ತೆ, ನೆರೆದಿರುವ ನಿಮ್ಮಂಥ ಆಹ್ವಾನಿತರನ್ನು ವರನ ಸ್ನೇಹ, ಸಂಬಂಧಾನುಸಾರ ಎರಡು ಪ್ರತ್ಯೇಕ ವಿಭಾಗಗಳನ್ನಾಗಿ ವಿಂಗಡಿಸಿ ಕುಳ್ಳಿರಿಸಲಾಗುತ್ತೆ. ಲಾಯರುಗಳು ಖುದ್ದಾಗಿ ಆಹ್ವಾನಿತರ ಹತ್ತಿರ ಬಂದು ಹೆಸರು, ವಿಳಾಸ, ಸಹಿ ಇತ್ಯಾದಿಗಳನ್ನು ರಿಜಿಸ್ಟರಿನಲ್ಲಿ ದಾಖಲಿಸಿಕೊಳ್ಳುತ್ತಾರೆ. ನಾಳೆ ಬೆಳಿಗ್ಗೆ ಆಹ್ವಾನಿತರ ಹೊಸ

ಸೇರ್ಪಡೆಯಾದರೆ, ಈ ಪ್ರಕ್ರಿಯೆಯು ನಾಳೆಯೂ ಮುಂದುವರಿಯತ್ತೆ. ಹ್ಹಾಂ...ಇನ್ನೊಂದು ಪ್ರಮುಖ ವಿಷಯ ಹೇಳಲು ಮರೆತಿದ್ದೆ. ಸಹಿ ಮಾಡುವ ಆಹ್ವಾನಿತರಿಗೆ ಮಾತ್ರ ಊಟದ ಟೋಕನ್ನು ವಿತರಿಸಲು ನಿರ್ಧಾರ ತೆಗೆದುಕೊಂಡಿರುತ್ತೆ. ಈ ಬಗ್ಗೆ ಕೊಂಚ ಸ್ಟ್ರಿಕ್ಟಾಗಿರಲು ಕೇಟರಿಂಗ್ ಮ್ಯಾನೇಜರಿಗೆ ನಿರ್ದೇಶನ ಕೊಟ್ಟಿರುತ್ತೆ'

'ಮತ್ತೆ ಅಗ್ರಿಮೆಂಟ್ ವಿಚಾರ ಅರ್ಥವಾಗ್ಲಿಲ್ಲ?'

'ಮದುವೆಯಾಗೋ ಇಬ್ರೂ ವರ್ಕಿಂಗ್ ಮೆನ್‌ಗಳು ತಾನೆ?' 'ಅವರ ಮಧ್ಯೆ ಸಂಸಾರದ ಸಾಮರಸ್ಯ ಚೆನ್ನಾಗಿರ್ಲಿ ಎಂದು ಕೆಲವು ನಡಾವಳಿಗಳನ್ನು ಈ ಅಗ್ರಿಮೆಂಟ್‌ನಲ್ಲಿ ಸೇರಿಸಲಾಗಿದೆ'. ಇದಕ್ಕೆ ಸಹಿ ಮಾಡಿದರೆ ಮಾತ್ರ ಮದುವೆಗೆ ಗ್ರೀನ್ ಸಿಗ್ನಲ್.

'ಧನ್ಯವಾದ ಮಹಾಸ್ವಾಮಿ, ತಮ್ಮಿಂದ ಅನೇಕ ವಿಷಯ ತಿಳಿದ ಹಾಗಾಯಿತು. ಅಂದ್ಹಾಗೆ ಈ ಮದುವೆಯ ಬಗ್ಗೆ ಇಷ್ಟೊಂದು ಅಥೆಂಟಿಕ್ ಆಗಿ ವಿವರಣೆ ಕೊಡ್ತಿದ್ದೀರಿ. ತಮ್ಮ ಪರಿಚಯಾನೆ ನನಗಾಗ್ಲಿಲ್ಲ'

'ನಾನು...ನಾನು ಈ ಹುಡುಗನನ್ನು ಮದುವೆಯಾಗ್ತಿರೋ ಮತ್ತೊಬ್ಬ ಹುಡುಗನ ತಾತ'

ಈ ಸಂಭಾಷಣೆಯ ಮಧ್ಯೆ ಯಾರೊ ನನ್ನ ಎಡಭಾಗದ ತೊಡೆಯನ್ನು ಜೋರಾಗಿ ಚಿವುಟಿದಂತಾಯ್ತು

'ರ್ರೀ ಮೆಲ್ಲಗೆ ಜಾಗ ಖಾಲಿ ಮಾಡೋಣ, ಯಾಕೊ ತೀರಾ ಭಯವಾಗ್ತಿದೆ ನನಗೆ..ಕೋರ್ಟು, ಸಮನ್ಸು, ಸಾಕ್ಷಿ....ಇವೆಲ್ಲಾ ಉಸಾಬರಿ ನಮಗ್ಯಾಕ್ರೀ?' ಎಂದು ಮೆಲ್ಲಗೆ ಕಿವಿಯಲ್ಲಿ ಉಸಿರಿದಳು ಪದ್ದಿ. ಹೊರಡಲು ಎದ್ದಾಗ ನನ್ನ ಕೈಜಗ್ಗಿದ ಆ ಹಿರಿಯರು,

'ಯಾಕೆ ದೇವ್ರು, ಹೊರಟು ಬಿಟ್ರೆ?' ಎಂದನುಮಾನಗೊಂಡು ಕೇಳಿದರು.

'ಏನಿಲ್ಲ, ಇನ್ನೊಂದು ಮದುವೆಗೆ ನಾವು ಅರ್ಜೆಂಟಾಗಿ ಹೋಗ್ಬೇಕಿತ್ತು. ಆದರೆ ಅದು ಈ ತರಹದ್ದಲ್ಲ, ಸಂಪ್ರದಾಯದ ರೀತ್ಯದ್ದು, ಬೆಳಿಗ್ಗೆ ಖಂಡಿತಾ ಬರ್ತೀವಿ ಇಲ್ಲೇ ಹತ್ತಿರದಲ್ಲೇ ನಮ್ಮ ಮನೆ ಎಂದು ಸ್ಪೀಡಾಗಿ ಹೇಳಿ ಉತ್ತರಕ್ಕೂ ಕಾಯದೆ ಪದ್ದಿಯನ್ನು ಹಿಂಬಾಲಿಸಿದೆ.

ದಾರಿಯಲ್ಲಿ ಪದ್ದಿಯ ಮೇಲೆ ಕೋಪಗೊಂಡು

'ಎಲ್ಲಿಗೆ ಹೋದ್ರು ನೀನು ಟೆನ್ಷನ್ನು ಮಾಡಿಕೊಳ್ಳುತ್ತಿ ಜತೆಗೆ ನನ್ನನ್ನೂ ಹೆದರಿಸ್ತಿ, ವ್ಯವಧಾನವೇ ಇಲ್ಲ'. ನನಗೆ ಇನ್ನೂ ಹಲವಾರು ಡೌಟುಗಳಿದ್ದವು. ಮನೆ ತುಂಬಿಸಿಕೊಳ್ಳುವ ಶಾಸ್ತ್ರದ ಬಗ್ಗೆ ನನಗೆ ಕ್ಲ್ಯಾರಿಫಿಕೇಶನ್ ಬೇಕಿತ್ತು' ಎಂದು ರೇಗಿದೆ.

'ರ್ರೀ...ಮನೆ ತುಂಬಿಸ್ಕೊಳೋದಿರ್ಲಿ, ಮೊದಲು ಹೊಟ್ಟೆ ತುಂಬಿಸ್ಕೊಳೊಬಗ್ಗೆ ಗಮನಹರಿಸ್ರಿ'

ಈ ಮದುವೆ ನಂಬ್ಕೊಂಡು ನಾನು ಮನೇಲಿ ಅಡುಗೇನೆ ಮಾಡಿಲ್ಲ' ಎಂದು ಹೊಸ ಬಾಂಬು ಸಿಡಿಸಿದಳು ಪದ್ದಿ. ಹತ್ತಿರದಲ್ಲೇ ಯಾವುದಾದರೂ ದರ್ಶಿನಿಯ ದರ್ಶನದ ಆಸೆ ಹೊತ್ತು ನಾವು ಮನೆಯ ದಾರಿ ಹಿಡಿದೆವು.

* * *

'ಮೇಲಿನ ಈ ಕಹಾನಿಯನ್ನು ನಾನು ನಮ್ಮ ಕಾಮನ್ ರೂಮು ಸಭೆಯಲ್ಲಿ ರಾಯರ ಅಪ್ಪಣೆ ಪಡೆದು ಯಥಾವತ್ತಾಗಿ ಹೇಳಿ ಮುಗಿಸುವ ವೇಳೆಗೆ, ಏನೊ ಧೊಪ್ಪೆಂದು ಸಪ್ಪಳವಾಗಿ, ರಾಯರು ತಮ್ಮ ಕುರ್ಚಿಯ ಸಮೇತ ಉರುಟಿಕೊಂಡು ಕೆಳಗೆ ಬಿದ್ದು ಬಿಟ್ಟಿದ್ದರು. ಗಾಬರಿಗೊಂಡು ನಾವು ಅವರ ನೆರವಿಗೆ ಧಾವಿಸಿ, ಅವರನ್ನು ಮೇಲಕ್ಕೆತ್ತಿ ಕುಳ್ಳಿರಿಸಿ'

'ಆರ್ ಯು ನಾರ್ಮಲ್ ಸರ್? ಎನಿಸೀರಿಯಸ್ ಪ್ರಾಬ್ಲಂ ಸರ್?' ಎಂದು ತವಕದಿಂದ ಪ್ರಶ್ನಿಸಿದೆವು.

'ಏನಿಲ್ಲ ಕಣಯ್ಯ, ನೀನು ಹೇಳಿದ ಕಹಾನಿ ಕೇಳ್ತಾ ಕೇಳ್ತಾ ನನಗೆ ನನ್ನ ಇಪ್ಪತ್ತು ವರ್ಷದ ಮೊಮ್ಮಗಳು ಧುತ್ತೆಂದು ನೆನಪಾಗಿದ್ದಳು. ಇತ್ತೀಚೆಗೆ ಅವಳು ರಾತ್ರಿ ಕನವರಿಕೆಯಲ್ಲಿ ' ಐ ಲೌವ್‌ಯು ವಸಂತ' ಅಂತಾ ನರಳ್ತಿರ್ತಾಳಂತೆ, ಅಸಲಿಗೆ, ಈ ವಸಂತ ಅನ್ನೋ ವ್ಯಕ್ತಿ ಕುಮಾರಿಯೊ? ಕುಮಾರನೊ? ಎಂಬ ಡೌಟು ಸಡನ್ನಾಗಿ ಬಂದು, ಕಣ್ಣು ಕತ್ತಲಿಗಿಟ್ಟು ಕೊಂಡಹಾಗಾಯ್ತು? ಎಂದು ರಾಯರು ವಿವರಣೆ ಕೊಟ್ಟರು.

'ರಿಲ್ಯಾಕ್ಸ್ ಸರ್' ಎಂದು ಸಮಾಧಾನಿಸಿದೆವು. ಯಾಕೊ ದಿಗಿಲುಗೊಂಡಂತಿದ್ದ ರಾಯರು ಸಭೆಯನ್ನು ಬರಖಾಸ್ತು ಮಾಡಿ ಮನೆಯ ಕಡೆ ಹೆಜ್ಜೆ ಹಾಕಿದರು. ಶಿಷ್ಟಾಚಾರದಂತೆ ನಾವೂ ಅವರನ್ನು ಹಿಂಬಾಲಿಸಿದೆವು. ದಾರಿಯಲ್ಲಿ ನನ್ನನ್ನು ಕುರಿತು ರಾಯರ್‍ರು

'ಏನಯ್ಯಾ ಸೈಲೆಂಟು ಮೂಡಿಗೆ ಹೊರಟು ಹೋಗಿದ್ದೀಯ? ಎಂದು ಕೇಳಿದರು.

'ಏನಿಲ್ಲ ಸರ್, ಆ ಮದುವೆ ಅಟೆಂಡ್ ಮಾಡಿದಾಗ್ಲಿಂದ ನನಗೊಂದು ಬಲವಾದ ಡೌಟು ಕಾಡ್ತಿದೆ. ಅದರ ಬಗ್ಗೆಯೆ ಯೋಚಿಸ್ತಾ ಬರ್ತಿದ್ದೆ' ಎಂದೆ.

ಪರ್‍ವಾಗಿಲ್ಲ ಡೌಟು ಕ್ಲಿಯರ್ ಮಾಡ್ಕೊಳ್ಳಯ್ಯ, ಪಾಪ ನಿನಗೆ ನನ್ನನ್ನು ಬಿಟ್ಟರೆ ಇನ್ಯಾರಿದ್ದಾರೆ?'

'ಬ್ಯಾಡಿ ಸರ್, ತಮ್ಮ ಹೆಲ್ತ್ ಇನ್ನೂ ಸರಿಇಲ್ಲ'

'ಐ ಆ್ಯಮ್ ನಾರ್ಮಲ್ ಐಸೇ, ಕೇಳಯ್ಯಾ?

'ಸರ್, ಈ ಸಮಾಜದಲ್ಲಿ ಇಂಥಹ ಮದುವೆಗಳೇ ಹೆಚ್ಚಾದರೆ ನಾವು ಕೆಲವು ಗೊಂದಲಕ್ಕೆ ಒಳಗಾಗುಲ್ವೆ? ನಮ್ಮ ಮಗನ ಹೆಂಡತಿಯನ್ನು 'ಸೊಸೆ' ಎಂದು ಸಂಬೋಧಿಸುತ್ತೇವೆ. ಆದರೆ ಮಗನ ಗಂಡನನ್ನು!? ಅಂತೆಯೆ ಮಗಳ ಹೆಂ...ಡ.....ತಿ...ಯನ್ನು?...... ಪ್ರಶ್ನೆ ಕೇಳಿ ರಾಯರ ಮುಖ ನೋಡಿದೆ. ಅವರ ಇಡೀ ದೇಹ ಕಂಪಿಸಿ ವೈಬ್ರೇಶನ್ ಮೋಡಿಗೆ ತಲುಪಿದೆ ಎಂಬ ಭಾಸವಾಯಿತು. ಅವರ ಹೆಜ್ಜೆಯಲ್ಲಿ ಏರುಪೇರು ಕಂಡು ಬ್ಯಾಲೆನ್ಸು ತಪ್ಪಿ ಮತ್ತೆ ಬಿದ್ದಾರೆಂಬ ಭಯ ಮೂಡಿ ಗಟ್ಟಿಯಾಗಿ ಅವರನ್ನು ಹಿಡಿದುಕೊಂಡೆ.

# ಹಾರ ಹಾಕಿಸಿಕೊಂಡವರು

– ಗುಂಡುರಾವ್ ದೇಸಾಯಿ

"ಅಲ್ಲಾ ಯಾರ ಮನಿಗರ ಹೋಗು ಮೊದಲು ಕಾಣೋದೇನು?" ಅಂದ ಪದ್ದು

"ಇದು ಎಂತಹಾ ಪ್ರಶ್ನೆರಿ? ಮನೆಗ ಏನ ಕಾಣ್ತಾವ, ಅದ ಟಿ.ವಿ, ಫ್ರೀಜ್, ಸೋಫಾ, ಷೋಕೇಸು, ಡೈನಿಂಗ್ ಟೇಬಲ್.." ಅಂತ ಒಂದಾ ಉಸಿರಿನಾಗ ಮುಗಿಸಿ ಬಿಟ್ಲು ಪಮ್ಮಿ

"ಅವು ಬಿಟ್ರ ಮತ್ತೇನು ಕಾಣಲ್ಲೇನು?" ಅಂದ ಪದ್ದು

ಮತ್ತೇನು ಕಾಣ್ತಾವ "ಅದ ಗೋಡೆ ಡಿಸೈನು, ಇಂಟಿರಿಯರ್ ಡೆಕೊರೇಷನ್'

'ಮತ್ತೇ....."

ಮತ್ತೇ ಏನು ಅಂತೀರಿ. ಅದೆ ಅವರ ಹೆಣ್ಣುಮಕ್ಕಳು ಹಾಕಿಕೊಂಡಿರೋ ಬಂಗಾರದ ಆಭರಣ, ಓಲೆ, ಮೂಗುತಿ. ಹೌದು ಏನಾರ ಕೋಡಸಂಗಿದ್ದಿರೇನು? ನಿಮ್ಮ ಮುಸುಡಿಗೆ ಎಲ್ಲಿ ಬರಬೇಕು ಆ ಯೋಗ್ಯತೆ"

ಕೇಳಿ ಅನಸುಕೊಂಡಗಾತು ಎಂದು ಬೇಸ್ತು ಬಿದ್ದ ಪದ್ದು ತೋರುಗೊಡದೆ "ನಿನಗ ಮತ್ತೇನು ಕಾಣಂಗೆ ಇಲ್ಲನೂ? ಇವ ಬದುಕೇನು? ಅವನ್ನ ಬಿಟ್ಟು ಹೇಳೆ? ಅಂದ

"ಮುಂಜಾನೆ ಮುಂಜಾನೆ ಏನು ತಲಿ ತಿನ್ನಕತಿರಿ, ಅವನ್ನ ಬಿಟ್ರ ಮತ್ತೇನು ಕಾಣೊದು ನೆಗದ ಬಿದ್ದೊದವರ ಫೋಟೊ" ಎಂದು ಸಿಟ್ಟಿನಿಂದ.

ಪದ್ದು ಖುಷಿಯಿಂದ "ನಾನು ಇದಕ್ಕಾಗಿಯೇ ಕಾಯ್ತಿದ್ದೆ. ಎಸ್, ಕಮ್ ಟು ದಿ ಪಾಯಿಂಟ್ ಅದನ್ನ ನಾನು ನಿನ್ನಿಂದ ನಿರೀಕ್ಷಿಸಿದ್ದು"

"ಏನು ಅಪದ್ದ ಅಪದ್ದ ಮಾತಾಡಕತಿರಿ! ಆ ಫೊಟೊ ತೊಗೊಂಡು ಏನ್ ಮಾಡತಿರಿ?"

"ಮಾಡೋದು ಬಿಡು. ಅಲ್ಲಿ ಯಾರ ಫೋಟೊ ಕಾಣತಾವ ಹೇಳು?"

"ಅದ ಹೇಳಿದನಲ್ಲಿರಿ ಕಾಗೆ ಹಾರಿಸಿಕೊಂಡವರೆಲ್ಲರದೂ....... ತಾತ ಅಜ್ಜಿ ಮುತ್ತಾತ ಮುತ್ತಜ್ಜಿ. ಅವರ ಅಜ್ಜ?

ಅದು ಸರಿ ಅಲ್ಲಿ ಹಾರ ಹಾಕಿಕೊಂಡವರ ಝುಂಡರ್ ಯಾವುದು ಹೆಚ್ಚಿರುತ್ತದ ಹೇಳು

ಯೋಚಿಸಿ "ಹ್ಞೂಂ.. ಗಂಡಸರದು"

"ಹಾಂ! ನನಗ ಇಷ್ಟ ಬೇಕಿತ್ತು. ಗಂಡಸರು ಯಾಕ ಜಲ್ದಿ ಸಾಯ್ತಾರ ಹೇಳು?"

"ಸುಡಗಾಡು ಚಟ ಮಾಡಿರತಾರ ಅದಕ ಹೋಗಿ ಬಿಡತಾರಾ?"

"ಹಾಂಗಾದರ ನಿಮ್ಮಪ್ಪನು ಸುಡಗಾಡು ಚಟ ಮಾಡ್ತಿದ್ದನೇನು?"

"ಅಡಿಕೆ ಹಳ್ಳು ಸಹಿತ ಹಾಕತಿರಲಿಲ್ಲರಿ?"

"ಮತ್ತೇ ಸತ್ತದ್ದು ಯಾವುದಕ? ಬಿ.ಪಿ ಶುಗರ್ರು ಬಂದಿತ್ತು ಅದರಲ್ಲಿ ಹಾರ್ಟ ಸೇರಿತು?"

"ಯಾಕ ಬಂತೂ......?"

"ಟೆನ್ಷನ್ ಗೆ ಬರತಾವರಿ?"

"ಟೆನ್ಶನ್ ಯಾಕ ಬರತಾವ?"

"ನೂರೆಂಟು ಚಿಂತಿ ಇರತಾವರಿ?"

"ಚಿಂತಿ ಯಾರವು?"

"ಮನೆ ಸಂಸಾರ ಮಕ್ಕಳು, ಹೊರಗಿಂದು?

ಮಧ್ಯ ಬಾಯಿ ಹಾಕಿ "ಅಷ್ಟ ಅಲ್ಲದ ನಿಮ್ಮವ್ವನ ಕಟಕಟಿ ಅಂತ ಅನ್ನು" ಎಂದ

"ಏನಂತಿರಿ....?" ಎಂದು ಕಣ್ಣು ತಿರಿವಿದಳು ಪಮ್ಮಿ

"ಇದ್ದ ಸತ್ಯದ ವಿಷಯ ಅಲ್ವೇ?"

"ಅಯ್ಯೋ ಏನಂತ ಮಾತಾಡತಿರಿ?"

"ಹೌದೇ, ನಿಮಗೇನು ಚಿಂತಿ ಸಂಸಾರ ನಡಿಸುವವನಿಗೆ ಇರೋದು ಟೆನಷನ್"

"ನಮಗ ಏನೆ ಕಷ್ಟ ಬಂದ್ರೂ ತಡಿಯೋ ಶಕ್ತಿ ಇರತಾದ, ಗಂಡಸರು ಹೇಡಿಗಳು"

"ಅಲ್ಲ ನಿಮಗ ಸೆಟ್ಲ್ ಮೆಂಟ್ ಲೈಫ್ ಇರತಾದ. ಗಂಡ ಹೇಂಗಾದರೂ ಕಷ್ಟ ಪಟ್ಟು ತಂದು ಹಾಕತಾನ. ರಿಲೀಫ್ ಇರತಾದ. ಆದರ ಗಂಡಿಗೆ ಅದು ಇಲ್ಲವೇ? ಸ್ವಲ್ಪ ಹೆಂಡ್ತಿ ಹೇಳುವಾಂಗ ಕೇಳುವಾಂಗ ಇದ್ರ ಅವನ್ನ ಅಟ್ಟಾಡಿಸಿ ಬಿಡತಾಳ. ಅವನ ಬದುಕು ನರಕನ ಸರಿ. ಅಂತವರ ಸಂಖ್ಯೆ ಬಾಳ. ಹಾಂಗಾಗಿ ಹಾರ ಹಾಕಿಕೊಂಡವರ ಸಂಖ್ಯೆನ ಗೋಡೆಯ ಮೇಲೆ ಜಾಸ್ತಿ ಇರತಾದ"

"ಹೌದಂತಿರೇನು? ಇಲ್ರೀ ನಾನು ಮುತ್ತೈದಿಯಾಗಿ ಸಾಯಬೇಕರಿ ?

"ಹಾಂಗಿದ್ರ ಏನು ಮಾಡಬೇಕು ಹೇಳು?"

"ತಪ್ಪಾತುರಿ, ಅದು ನೆಕಲೆಸ್ ಅಂತಿದ್ದೆನೆಲ್ಲ ಅದು ಒಲ್ಲೇರಿ, ಕಾಂಚಿವರಂ ಸೀರೆ ಒಲ್ಲೇರಿ, ಕಾರು ಬೇಡಾರಿ, ನೀವು ಯಾವಾಗರ ಬಂಗ್ಲೆ ಕಟ್ಟಸರಿ, ಕೇಳಲಲ್ರಿ"

"ಹಾಂ! ವೇರಿ ಗುಡ್ ವೇರಿ ಗುಡ್" ಅಂದ ಪದ್ದು ಖುಷಿಯಿಂದ

"ಆದರ ಮುತ್ತೈದೆ ಸಾವು ಅಪೇಕ್ಷ ಪಡೋಕಿರಿ ಅದಕ ಇವೆಲ್ಲವನ್ನೂ ನಾನು ಹೇಳಕಿನ ಮೊದಲ ಮಾಡಿಬಿಟ್ಟರ ಸುಖವಾಗಿ ಕಣ್ಣು ಮುಚ್ಚತಿನ್ರೀ ಇಲ್ಲಾಂದ್ರ ....................?" ರುದ್ರಾವತಾರ ತಾಳಿದ್ಲು.

ಪದ್ದುಗ ಮುಂದಿಂದೆಲ್ಲಾ ಅರ್ಥ ಆಗಿತ್ತು. ಸುಮ್ಮಸುಮ್ಮನ ಊದೋದು ಕೊಟ್ಟು ಬಾರಸೋದು ತೊಗA

ಂಡಂಗ ಆಗಿತ್ತು.

# ಸಾಹಿತ್ಯ ಸಂಭ್ರಮ

**– ಜಿ.ವಿ.ನಿರ್ಮಲ**

ನೀರಜ ಮನೆಯೊಳಗೆ ಪ್ರವೇಶಿಸಿ, ಚಪ್ಪಲಿ ಬಿಡುತ್ತಿರುವಂತೆಯೇ 'ರೀ........' ಎಂದು ಕೂಗಿದಾಗಲೇ ವಿಶ್ವನಿಗೆ ಇವತ್ತು ಏನೋ ಹೊಸ ಯೋಜನೆಗೆ ನಾಂದಿಯಾಗಿದೆ ಅಂತ ತಿಳಿಯಿತು. ಎಷ್ಟಾದ್ರೂ ನಲವತ್ತೈದು ವರ್ಷಗಳ ದಾಂಪತ್ಯವಲ್ಲವೇ? ಹೆಂಡತಿಯ ಭಾವನೆಗಳ ಒಂದೇ ಒಂದು ಎಳೆ ಸಿಕ್ಕರೂ ಸಾಕು. ಅದರ ಸಂಪೂರ್ಣ ಚಿತ್ರ ಕಾಣುವ ಕಲೆ ವಿಶ್ವನಿಗೆ ಒಲಿದಿದೆ. ಆದರೂ ಈಗ ನೀರಜನ ಉತ್ಸಾಹದ ಬುಗ್ಗೆ ಉಕ್ಕಿ ಹರೀತಿರೋದಕ್ಕೆ ಕಾರಣವೇನೆಂದು ಸ್ಪಷ್ಟವಾಗಿ ಗೋಚರಿಸಲಿಲ್ಲ. ಇಂದು ನೀರಜ ಹೋಗಿದ್ದು ಪ್ರಸಿದ್ಧ ಮಹಿಳಾ ಸಾಹಿತಿಯೊಬ್ಬರ ಭಾಷಣ ಕೇಳಕ್ಕೆ ಅಂತ ವಿಶ್ವನಿಗೆ ಗೊತ್ತು. ಭಾಷಣ ಕೇಳೋಕ್ಕಿಂತ ನೀರಜ ಅಲ್ಲಿಗೆ ಹೋಗುವುದಕ್ಕೆ ನಿಜವಾದ ಕಾರಣ, ಮಗ ಯುಗಾದಿಗೆ ಕೊಡಿಸಿದ್ದ ತನ್ನ ಹೊಸ ಡಿಸೈನ್ ಸೀರೇನ ಗೆಳತಿಯರಿಗೆ ಪ್ರದರ್ಶಿಸುವುದಕ್ಕೆಂಬ ರಹಸ್ಯವೂ ಗೊತ್ತಿತ್ತು. ಯಾಕೇಂದ್ರೆ ಸಾಹಿತ್ಯದಲ್ಲಿ ನೀರಜನಿಗಾಗಲೀ, ಅವಳ ಸ್ನೇಹಿತೆಯರಿಗಾಗಲೀ ಆಸಕ್ತಿ ಇದ್ದದ್ದು ಅಷ್ಟಕಷ್ಟೆ. ಹೀಗಿರೋವಾಗ ಅಲ್ಲಿ ನೀರಜನ ಉತ್ಸಾಹ ಹೆಚ್ಚಿಸುವ ಸಂಗತಿ ಯಾವ್ದಿರಬಹುದ್ದು ಎಂದು ತಲೆ ಕೆರೆದುಕೊಂಡ. ಉಹುಂ, ಏನೂ ಹೊಳೆಯಲಿಲ್ಲ. ಹೀಗೆ ಯೋಚಿಸುತ್ತಿರುವಾಗ ನೀರಜಳೇ ಮಾತಾಡಿದಳು.

'ರೀ, ಇವತ್ತು ನಮ್ಮ ಸ್ನೇಹಿತೆಯರೆಲ್ಲಾ ಒಂದು ಹೊಸ ನಿರ್ಧಾರ ಮಾಡಿದ್ದೀವಿ. ತಿಂಗಳಿಗೊಂದು ಸಲ ಸೇರಿ, ಸುಮ್ಮನೆ ಹರಟೆ ಹೊಡೆದು, ಊಟ ಮಾಡಿ ಸಮಯ ಕಳೆಯೋ ಬದ್ಲು ಎಲ್ರೂ ಒಂದೊಂದು ಕವನಾನೋ, ಕತೇನೋ ಬರ್ಕೊಂಡ್ಹೋಗಿ ಓದೋದು. ನಂತರ ನಮ್ಮ ನಮ್ಮಲ್ಲೇ ಅವುಗಳ ಬಗ್ಗೆ ಚರ್ಚೆ ಮಾಡೋದು. ಹೀಗೆ ಬರೀತಾ, ಬರೀತಾ ಹೋದ್ರೆ ನಾವೂ ಸಾಹಿತಿಗಳಾಗಬಹುದು. ಕನ್ನಡ ಕಲಿತದ್ದಕ್ಕೂ ಸಾರ್ಥಕ. ಕನ್ನಡ ತಾಯಿಯ ಸೇವೆನೂ ಮಾಡಿದಂತಾಗತ್ತೆ' ಎಂದಳು.

ರಹಸ್ಯ ಬಯಲಾಯಿತು. ಆದರೆ ಇದ್ದಕ್ಕಿದ್ದಂತೆ ಇಂತಹ ಒಳ್ಳೆಯ ಯೋಚನೆ ಹಾಗೂ ಯೋಜನೆಗೆ ಕಾರಣವೇನು? ಅನ್ನೋ ಪ್ರಶ್ನೆ ವಿಶ್ವನ ಮುಂದೆ ಎತ್ತು. ಈಗೀಗ ವಿಶ್ವನ ಪ್ರಶ್ನೆಗಳು ಮನಸ್ಸಿನಲ್ಲಿಯೇ, ಮೌನವಾಗಿರುವುದೇ ಹೆಚ್ಚು. ಏಕೆಂದರೆ ನೀರಜ ಅವನ ಮಾತಿಗೆ ಅವಕಾಶ ಕೊಟ್ಟರೆ ತಾನೇ? ನೀರಜಳೇ ಮುಂದುವರಿದು 'ಇವತ್ತು ಭಾಷಣ ಮಾಡಿದ ಸಾಹಿತಿಗಳೇ ಹೇಳಿದ್ರು. ಆಕೇನೂ ಬಹಳ ತಡವಾಗೇ ಬರೆಯೋಕ್ಕೆ ಪ್ರಾರಂಭಿಸಿದ್ರಂತೆ. ಮಹಿಳೆಯರಿಗೆ ಅವರಲ್ಲಿರುವ ಸುಪ್ತ ಪ್ರತಿಭೆಯ ಬಗ್ಗೆ ಅವರಿಗೇ ತಿಳಿದಿರಲ್ವಂತೆ. ವಯಸ್ಸಾದಾಗ ಸಾಕಷ್ಟು ಅನುಭವವೂ ಇರೋದ್ರಿಂದ ಬರೆಯಕ್ಕೆ ಪ್ರಾರಂಭಿಸಿದ್ರೆ ಸಾಕು. ಸಾಕಷ್ಟು ಒಳ್ಳೆಯ ಸಾಹಿತ್ಯ ರಚಿಸಬಲ್ರಂತೆ. ನಾವು ಎಷ್ಟೊಂದು ಮಾತಾಡ್ತೀವಿ. ಅದನ್ನೇ ಬರೆದ್ರೆ ಬೇಕಾದಷ್ಟು ಸಾಹಿತ್ಯ ಸೃಷ್ಟಿ ಮಾಡ್ಬಹುದ್ದು ಅಂತ ಹೇಳಿದ್ರು.' ಎಂದು ಬಡಬಡಿಸಿ,

ತನ್ನ ಕೆಲಸವಾಯಿತು ಎಂದು ವಿಶ್ವನ ಪ್ರತಿಕ್ರಿಯೆಗೂ ಕಾಯದೆ, ಯಾವುದೋ ಹಾಡನ್ನು ಗುಣುಗುಣಿಸುತ್ತಾ ಅಡುಗೆ ಮನೆ ಕಡೆ ನಡದೇ ಬಿಟ್ಟಳು. ಅಬ್ಬಾ! ಇವಳ ಹಾಗೂ ಇವಳ ಸ್ನೇಹಿತೆಯರ ಉತ್ಸಾಹಕ್ಕೆ ಮೇರೆಯೇ ಇಲ್ಲವೇ? ಎಂದು ಮತ್ತೊಮ್ಮೆ ಆಶ್ಚರ್ಯಚಕಿತನಾದ ವಿಶ್ವನಾಥ.

ಒಂದೆರಡು ದಿನಗಳ ನಂತರ ನೀರಜ ಅಂಗಡಿಯಿಂದ ಒಂದು ಕಟ್ಟು ಬಿಳಿ ಹಾಳೆ, ಒಂದೆರಡು ಗಟ್ಟಿ ರಟ್ಟಿನ ಪುಸ್ತಕಗಳು, ಅರ್ಧ ಡಜ಼ನ್ ಬಾಲ್ ಪೆನ್ನುಗಳನ್ನು ತಂದು, ಅವುಗಳನ್ನು ಡ್ರೆಸ್ಸಿಂಗ್ ಟೇಬಲ್‌ನ ಒಂದು ಬದಿಯನ್ನು ತೆರವುಗೊಳಿಸಿಟ್ಟಳು. ಅಂಗಡಿಯಿಂದ ಆ ಸಾಮಗ್ರಿಗಳನ್ನು ತಂದದ್ದಕ್ಕಿಂತ ಡ್ರೆಸ್ಸಿಂಗ್ ಟೇಬಲ್‌ನಲ್ಲಿ ಅಷ್ಟು ಜಾಗ ತೆರವುಗೊಳಿಸಿದ್ದೇ ಸಾಹಸದ ಕೆಲಸವಾಯ್ತು. ಸದಾಕಾಲ ಮೌನವಾಗಿಯೇ ಇರುವ ವಿಶ್ವ ಅಪರೂಪವಾಗಿ 'ಏನು ಅಮ್ಮಾವ್ರೇ? ಅ, ಆ, ಇ, ಈ ನೆನಪು ಮಾಡ್ಕೊಳ್ಳೋ ತಯ್ಯಾರೀನಾ?' ಎಂದು ಕೇಳಿ ಬಿಟ್ಟ. ನೀರಜನ ಮುಖ ಕೆಂಪಾಯಿತು. ನಾಚಿಕೆಯಿಂದಲ್ಲ; ಕೋಪದಿಂದ. 'ನಂಗೆ ಮರ್ತಿದ್ರೆ ಅಲ್ವಾ ನೆನಪು ಮಾಡ್ಕೊಳ್ಳೋ ಯೋಚ್ನೆ. ಖಂಡಿತ ಅದ್ರ ಅವಶ್ಯಕತೆ ಇಲ್ಲ. ನಾನು ಕನ್ನಡ ಮೀಡಿಯಮ್‌ನಲ್ಲೇ ಹೈಸ್ಕೂಲು ತನಕ ಓದಿದ್ದು. ಕಾಲೇಜ್ನಲ್ಲೂ ಕನ್ನಡ ಮೀಡಿಯಮ್‌ನಲ್ಲೇ ಓದೋಣ ಅಂತಿದ್ದೆ. ಆದ್ರೆ ಆ ಹಾಳು ಕಾಲೇಜ್ನಲ್ಲಿ ಕನ್ನಡ ಮೀಡಿಯಮ್ ಇರ್ಲಿಲ್ಲ. ಇಂಗ್ಲಿಷ್ ಮೀಡಿಯಮ್‌ಗೆ ಬದಲಾದಾಗ, ಒಂದ್ನೂರೂ ಅರ್ಥವಾಗ್ದೇ ಎಷ್ಟು ಪಾಡು ಪಟ್ಟಿದೀನಿ ಅಂತ ನಂಗೇ ಗೊತ್ತು.' ಎಂದ್ಳು.

'ಅರೆ ಅವತ್ತು, ಪಕ್ಕದ ಮನೆಗೆ ಹೊಸ್ದಾಗಿ ಬಂದೀರೋರ ಹತ್ರ, ನಾನು ಮೊದ್ಲಿಂದ್ಲೂ ಇಂಗ್ಲೀಷ್ ಮೀಡಿಯಮ್‌ನಲ್ಲೇ ಓದಿದ್ದು. ಕನ್ನಡ ಅಷ್ಟು ಚೆನ್ನಾಗಿ ಬರಲ್ಲ. ಹಾಗೆ, ಹೀಗೆ ಅಂತ ನಿನ್ನ ಹರಕು ಮುರುಕು ಇಂಗ್ಲಿಷ್‌ನಲ್ಲಿ ಹೇಳ್ತಾ ಇದ್ಯಲ್ಲಾ?'

'ಓಹ್. ಒಂದೊಂದ್ಸಾರಿ ಸಮಯಕ್ಕೆ ಸರ್‍ಯಾಗಿ ಸುಳ್ಳು ಹೇಳ್ಬೇಕು ಅಂತ ಆ ಕೃಷ್ಣ ಪರಮಾತ್ಮನೇ ಹೇಳಿಲ್ವಾ? ಅದ್ಸರಿ, ನಾವು ಮಾತಾಡ್ತಾ ಇದ್ದದ್ದನ್ನ ಕದ್ದು ಕೇಳ್ತಾ ಇದ್ರಾ ಅಥ್ವಾ ಆ ಮಿಟಕ್ಲಾಡಿನಾ ಕದ್ದು ನೋಡ್ತಾ ಇದ್ರಾ?' ಎಂದಾಗ ವಿಶ್ವ ತನಗೇ ಬಂತಲ್ಲಾ ಆಪತ್ತು ಎಂದು ಗೊಣಗಿ, ಮಾತು ಬದ್ಲಾಯಿಸಲು 'ಅದ್ಸರಿ. ನೀನು ಕಥೆ ಬರೀತೀಯೋ ಅಥ್ವಾ ಕವನಾನೋ?' ಅಂತ ಕೇಳಿದ.

ಆ ಪ್ರಶ್ನೆ ತಲೆಗೆ ಹೊಕ್ಕ ಕೂಡಲೇ ನೀರಜನ ಕೋಪ ಕರಗಿ ಮಾಯವಾಗಿ ಹೋಯ್ತು. 'ಹೌದಲ್ವಾ? ನಾನಿನ್ನೂ ಯೋಚ್ಸಿಲ್ಲಾರೀ. ನೀವೇ ಹೇಳಿ. ಯಾವ್ದು ಬರೆದ್ರೆ ಚೆನ್ನ' ಅಂತ ಕೇಳಿದ್ಳು.

ನೀರಜನ ಕೋಪ ಇಳಿದದ್ದು ಗಮನಿಸಿದ ವಿಶ್ವ ಮನಸ್ಸಿನಲ್ಲೇ 'ಬಚಾವಾದೆ' ಅಂತ ಗೊಣಗಿದ. ಅವಳಿಗೆ ಬೆಣ್ಣೆ ಹಚ್ಚೋಕೆ 'ನಿನ್ನ ಅನುಭವ ಮುಖ್ಯ ನೀರಜ. ಯಾವ್ದಾದ್ರೂ ಸರಿ. ಅದೂ ಅಲ್ದೆ ಪದ್ಯಕ್ಕೂ, ಗದ್ಯಕ್ಕೂ ಈಗ ಹೆಚ್ಚು ವ್ಯತ್ಯಾಸವೇ ಇರಲ್ಲ. ಗದ್ಯ ಬರೆದು, ಆ ಸಾಲುಗಳನ್ನ ತುಂಡರಿಸಿ, ಬೇರೆ ಬೇರೆ ಸಾಲುಗಳಲ್ಲಿ ಬರದ್ರೆ ಪದ್ಯ ಆಗತ್ತೆ. ಪ್ರಾಸ, ಗೀಸ ಅಂತ ತ್ರಾಸ ಪಡೋದೇ ಬೇಕಾಗಿಲ್ಲ'

‘ಅದೂ ನಿಜ. ಈಗೀನ ಪದ್ಯಗಳಲ್ಲಿ ಹಿಂದಿನ ಪದ್ಯಗಳ ಸೊಗಸೇ ಕಾಣ್ಣಲ್ಲ. ನಮ್ಮ ಕಾಲ್ದಲ್ಲಿ ‘ಬಣ್ಣದ ತಗಡಿನ ತುತ್ತೂರಿ, ಕಾಸಿಗೆ ಕೊಂಡನು ಕಸ್ತೂರಿ, ನಾಗರ ಹಾವೇ ಹಾವೊಳು ಹೂವೆ, ಬಾಗಿಲ ಬಿಲದಲಿ ನಿನ್ನಯ ಠಾವೆ’ ಎಂದು ರಾಗವಾಗಿ ಹೇಳ್ತಾ ಇದ್ದ ಪದ್ಯಗಳು ಇವತ್ತೂಗ್ಗ ನೆನಪಿವೆ. ಇವತ್ತು ಪದ್ಯಗಳಲ್ಲೂ ಅತ್ಯಾಚಾರ, ರಾಜಕೀಯ, ಕುಹಕ, ವ್ಯಂಗ್ಯ. ದ್ವಂದ್ವಾರ್ಥ ಅಲ್ವೇನ್ರೀ? ರಾಗವಾಗಿ ಹೇಳೋದು ದೂರದ ಮಾತು’ ಎಂದು ಹೇಳುತ್ತಾ ಐವತ್ತು ವರ್ಷ ಹಿಂದೆ ಜಾರಿದಳು ನೀರಜ.

‘ಸರಿ, ಸರಿ, ನಿಮ್ಮ ಸ್ನೇಹಿತೆಯರು ಈಗ ಹೊಸ ತರಹದ ಕವನಗಳ್ನ ಬರೀರಿ. ಹಾಡಿ, ಕುಣಿದು ಸಂತೋಷ ಪಡಿ. ಈಗ ನಾನು ಅಂಗಡಿ ಕಡೆ ಹೋಗ್ತಾ ಇದೀನಿ ಏನಾದ್ರೂ ತರ್ಬೇಕಾ ಹೇಳು.’ ಎಂದು ವಿಶ್ವ ಅಲ್ಲಿಂದ ಜಾರಿಕೊಂಡ.

ಮುಂದಿನ ಮೂರು ದಿನಗಳಲ್ಲಿ ನೀರಜ ಅಡುಗೆ ಕೆಲ್ಸ ಬೇಗ ಬೇಗ ಮುಗ್ಸಿ, ಬರವಣಿಗೆಗೆ ಕೂಡುತ್ತಿದ್ದಳು. ಒಂದೆರಡು ದಿನಗಳಲ್ಲೇ ‘ಡ್ರೈ’ ವೇಸ್ಟ್ ಕಸದ ಬುಟ್ಟಿ, ಹಾಳೆಗಳ ಚೆಂಡುಗಳಿಂದ ತುಂಬ್ಹೋಯ್ತು. ಕೆಲಸದ ನಾಗಿ ‘ಇದೇನಮ್ಮೋರೇ. ಒಳ್ಳೆ ಹಾಳೆಗಳ್ನ ಚೆಂಡು ಮಾಡಿ, ಮಾಡಿ. ಹಾಕೀರೋರು ಯಾರು? ನಿಹಾಲ್‌ಗೆ ರಜ ಬಂದಿದ್ಯಲ್ಲಾ ಅದಕ್ಕೆ ಹೀಗೆ ಮಾಡಿದ್ಯಾ?’ ಅಂತ ಕೇಳಿದ್ಳು. ಆ ಮಾತನ್ನ ಕೇಳಿದ ವಿಶ್ವನಿಗೆ ಮೌನವಾಗಿರುವುದು, ನಿಶಬ್ದವಾಗಿ ನಗುವುದು ಬಹಳವೇ ಕಷ್ಟವಾಯ್ತು. ಜೋರಾಗಿ ನಗುವುದುಂಟೇ? ಮಹಾಪರಾಧ. ‘ನೋಡು ಬುಟ್ಟಿ ತುಂಬಿದ್ರೆ ಆಚೆ ಬಿಸಾಡು. ಜಾಸ್ತಿ ತಲೆಹರಟೆ ಬೇಡ’ ಎಂದು ಅಡುಗೆ ಮನೆಯಿಂದ್ಲೇ ನೀರಜನ ತಾಕೀತು ಬಂತು. ಅಮ್ಮಾವ್ರ ಮೂಡ್ ಸರಿ ಇಲ್ಲವೆಂದು ಅರ್ಥ ಮಾಡಿಕೊಂಡ ನಾಗಿ ಬುಟ್ಟಿ ಹಿಡಿದು ಹೊರಗೆ ಹೋದ್ಳು.

ಅಂದು ರಾತ್ರಿ ಮನೆಯವರೆಲ್ಲಾ ಟಿವಿ ಮುಂದೆ ಕೂತು ಮಾತಾಡ್ತಾ ಇದ್ದಾಗ ನಿಹಾಲ್ ‘ಪಪ್ಪಾ, ಅಜ್ಜಿಗೆ ಯಾವ್ದೋ ಎಕ್ಸಾಮ್ ಇದೆ. ಮಧ್ಯಾಹ್ನ ಎಷ್ಟೊಂದು ಬರೀತಾರೆ ಗೊತ್ತಾ?’ ಎಂದು ಹೇಳಿದ. ಅದನ್ನು ಕೇಳಿದ ಸಂದೀಪ್‌ಗೆ ಆಶ್ಚರ್ಯ ಆಯ್ತು. ‘ಹೌದಾಮ್ಮಾ? ಯಾವ ಎಕ್ಸಾಮ್’ ಅಂತ ಕೇಳಿದ.

‘ಎಕ್ಸಾಮ್, ಗಿಗ್ಸಾಮ್ ಏನೂ ಇಲ್ವೋ. ಹಾಗೇ ಏನೋ ಕವನ, ಕತೆ ಬರಿಯೋಣ ಅಂತ ಬರೀತಿದ್ದೆ’ ಎಂದು ಸ್ವಲ್ಪ ಜಂಭದಿಂದ ಹೇಳಿದಾಗ ಮಗ ಸೊಸೆ ಇಬ್ರೂ ಕಕ್ಕಾಬಿಕ್ಕಿಯಾದ್ರು. ಅಮ್ಮ ಈ ವಯಸ್ನಲ್ಲಿ ಹೊಸ ಹವ್ಯಾಸ ಶುರು ಹಚ್ಕೊಂಡಿದಾರಲ್ಲಾ ಅಂತ ಆಶ್ಚರ್ಯವೂ ಆಯ್ತು.

‘ಒಳ್ಳೆಯದಮ್ಮಾ. ಹಾಳು ಟಿವಿ ಸೀರಿಯಲ್ ನೋಡೋಕ್ಕಿಂತ ಮೇಲು’ ಎಂದು ಅಮ್ಮನನ್ನು ಪ್ರೋತ್ಸಾಹಿಸಿದ ಸಂದೀಪ್‌ನ ಮಾತುಗಳಿಗೆ ಸೊಸೆ ನಿಖಿತಾಳೂ ಹೂಂಗುಟ್ಟಿದ್ಳು. ನೀರಜಳ ಉತ್ಸಾಹ ನೂರ್ಮಡಿಸಿತು.

ಮುಂದಿನ ವಾರಗಳಲ್ಲಿ ಮಧ್ಯಾಹ್ನದ ಟಿವಿ ಸೀರಿಯಲ್‌ಗಳು ಬಂದ್ ಆದ್ವು. ನೀರಜಾಳ ಒಂದೆರೆಡು ಬಾಲ್ ಪೆನ್‌ಗಳ ಇಂಕು ಬರಿದಾಯ್ತು. ಕೆಲಸದ ನಾಗಿ ಉಸಿರೆತ್ತದೆ ಕಸದ ಬುಟ್ಟಿ ಖಾಲಿ ಮಾಡಿದ್ಳು. ಮಗು ನಿಹಾಲ್ ಅಜ್ಜಿಗೆ ಡಿಸ್ಟರ್ಬ್ ಮಾಡಬಾರದೆಂದು ತನ್ನ ಪಾಡಿಗೆ ತಾನು ಆಟವಾಡಿಕೊಂಡ. ವಿಶ್ವನಿಗೆ ನೀರಜಳ ಧ್ವನಿ ಕೇಳಿಸದೆ ಮನೆಯೆಲ್ಲಾ ಮೌನವ್ರತ ಮಾಡಿದಂತೆ ಬಣಬಣಗುಟ್ಟಿತು.

ಅಂದೊಂದು ದಿನ ನೀರಜ ಫೋನ್‌ನಲ್ಲಿ ಮೆತ್ತಗೆ ಮಾತಾಡ್ತಾ ಇದ್ಳು. ಪೇಪರ್ ಓದ್ತಾ ವರಾಂಡದಲ್ಲಿದ್ದ ವಿಶ್ವನಿಗೆ ಆಶ್ಚರ್ಯ. ಎಂದೂ ಹೀಗೆ ಮೆತ್ತಗೆ ಮಾತಾಡೋಳೇ ಅಲ್ವಲ್ಲಾ. ಏನಾಗ್ತಾ ಇದೆ ಅಂದ್ಕೊಂಡ. ಆದ್ರೂ ಪ್ರಶ್ನೆ ಮಾಡುವ ಧೈರ್ಯ ಮಾಡ್ಲಿಲ್ಲ. ಅಷ್ಟರಲ್ಲಿ ನೀರಜನ ಧ್ವನಿ ಸ್ವಲ್ಪ ಜೋರಾಯ್ತು. 'ಹುಟ್ಟು ಗುಣ ಸುಟ್ರೂ ಹೋಗಲ್ಲ' ಅನ್ನೋ ಗಾದೆ ಹಾಗೆ ನೀರಜಳಿಗೆ ಫೋನ್‌ನಲ್ಲಿ ಮೆತ್ತಗೆ ಮಾತಾಡೋದು ಸಾಧ್ಯವೇ? 'ವಾರಿಜ ಎಲ್ರೂ ಸಿಲ್ಕ್ ಸೀರೇನೇ ಉಡೋಣ. ಫೋಟೋ ತೆಗ್ಸಿದ್ರೆ ಚೆನ್ನಾಗಿರತ್ತೆ. ಆ ಸುಮತಿ, ಯಾವತ್ತೂ ಸೀರೇನೇ ಉಟ್ಟಿಲ್ಲ ಅನ್ನೋ ತರಹ ಡ್ರೆಸ್ ಹಾಕ್ಕೊಂಡ್ ಬರ್ತೀನಿ ಅಂದ್ರೆ ನೀವೂ ಬೇಡ ಅನ್ನಿ' ಅಂತಾ ಕಿವಿಮಾತು ಹೇಳ್ತಾ ಇದ್ಳು. ಆಗ ವಿಶ್ವನಿಗೆ ಗೊತ್ತಾಯ್ತು ಇದು ಸಾಹಿತ್ಯ ಸಭೆಯ ತಯಾರಿ ಅಂತ. 'ರೀ, ವಾರಿಜ ಅನ್ನದ ಐಟಮ್ ಬೇಡಾರಿ. ತುಂಬಾ ಜನ ಅನ್ನ ತಿನ್ನೋಕೆ ಹಿಂದುಮುಂದು ನೋಡ್ತಾರೆ. ಹಾಳಾದ್ದು ಸಕ್ಕರೆ ಖಾಯಿಲೆ. ಸ್ವೀಟ್ ಹೇಗೋ ತಿನ್ನೋಣ. ಅನ್ನ ಮಾತ್ರ ಬೇಡ.' ಎಂದು ಮತ್ತೊಂದು ಸೂಚನೆ. ಆ ಕಡೆ ಧ್ವನಿ ವಿಶ್ವನಿಗೆ ಕೇಳಲ್ಲ. ಮುಂದೆ 'ವಾರಿಜ ಒಡವೆ ಹೆಚ್ಚೇನೂ ಬೇಡ ಅಂತ ನೀವು ಹೇಳಿದ್ದು ಸರಿ. ಆದ್ರೆ ಆ ರಮಾಮಣಿ ಮೈ ತುಂಬಾ ಎಂಥೆಂಥದೋ ಒಡವೆಗಳ್ನ ಹೇರ್ಕೊಂಡೇ ಬರ್ತಾಳೆ. ನಾವು ಬಿಚ್ಕೋಲೆ ಗೌರಮ್ಮಗಳ ತರಹ ಹೋದ್ರೆ ಚೆನ್ನಾಗಿರತ್ತಾ? ನಮ್ಮ ಮನೆಯವ್ರಿಗೇ ಅವಮಾನ ಅಲ್ವಾ? ನಾನಂತೂ ಹವಳ, ಮುತ್ತಿನ ಸೆಟ್ ಹಾಕ್ಕೋಳೋಣಾ ಅಂತ ಡಿಸೈಡ್ ಮಾಡೀದೀನಿ. ನಾನು ಉಡೋ ಸೀರೆಗೂ ಮ್ಯಾಚ್ ಆಗತ್ತೆ'. ವರಾಂಡದಿಂದ್ಲೇ ಸಂಭಾಷಣೇನ ಕದ್ದು ಕೇಳುತ್ತಿದ್ದ ವಿಶ್ವನಿಗೆ ಹೆಮ್ಮೆಯಾಯ್ತು. ಅಂತೂ ಮನೆಯವ್ರಿಗೆ ಅವಮಾನ ಆಗಬಾರ್ದು ಅಂತ ಕಾಳಜಿ ಇದ್ಯಲ್ಲಾ. ಭೇಷ್ ಅಂದ್ಕೊಂಡ. ಮತ್ತೆ ಆ ಫೋನ್‌ವಾಣಿ ಅತ್ತ ಕಡೆಯಿಂದ ಏನು ಹೇಳ್ತೋ ಗೊತ್ತಿಲ್ಲ. ನೀರಜನ ಧ್ವನಿ 'ಅಯ್ಯೋ ನಂದೂ ಇನ್ನೂ ನೀಟ್ ಕಾಪಿ ರೆಡಿ ಆಗಿಲ್ರೀ. ಇದೆಲ್ಲಾ ಆದ್ಮೇಲೆ ಅದೇನು ಮಹಾ. ಅಗತ್ತೆ ಬಿಡಿ. ಅಂದ್ಹಾಗೆ ಸಾಹಿತ್ಯ ಗೋಷ್ಠಿ ಆಗ್ತಾ ಇರೋವಾಗ ಟೀ ಜೊತೆ ಪಕೋಡ ಮಾಡಿಸ್ತೀನಿ ಅಂತಿದ್ಳು ರೇಖಾ. ಅಲ್ವಾ? ಅದಕ್ಕೆ ಪುದೀನಾ ಹಾಕ್ಸು ಅಂತ ಅವ್ಳಿಗೆ ಹೇಳ್ಬೇಕು. ನೀವೂ ಹೇಳಿ. ನಂಗಂತೂ ಪುದೀನ ಪಕೋಡಾ ಅಂದ್ರೆ ಬಾಯಲ್ಲಿ ನೀರೂರತ್ತೆ.' ಹೀಗೆ ಸಾಹಿತ್ಯ ಗೋಷ್ಠಿಯ ತಯಾರಿ ಎಲ್ಲಾ ಅಚ್ಚುಕಟ್ಟಾಗಿ ಫೋನ್‌ನಲ್ಲಿ ನಡೀತ್ಲೇ ಇತ್ತು.

'ಡಿ' ಡೇ ಬಂದೇ ಬಂತು. ಸಮಯಕ್ಕೆ ಸರ್ಯಾಗಿ ಸಿಲ್ಕ್ ಸೀರೆ ಉಟ್ಟು, ಮುತ್ತು–ಹವಳದ ಸೆಟ್ ಹಾಕ್ಕೊಂಡು, ಸ್ವಲ್ಪ ಜಾಸ್ತಿಯಾಗೇ ಸೆಂಟ್ ಹಾಕ್ಕೊಂಡು ನೀರಜ ತಯಾರಾದಳು. 'ರೀ' ಎಂದು ಕೂಗುತ್ತಿದ್ದ ಹಾಗೇ 'ಆಲ್ ದ ಬೆಸ್ಟ್.

ನೀರಜ. ಹೋಗಿ ಬಾ. ಮನೆ ಕಡೆ ನಾನು ನೋಡ್ಕೋತೀನಿ' ಅಂತ ನೀರಜ ಹೇಳುವುದಕ್ಕಿಂತ ಮುಂಚೆಯೇ ಹೇಳಿದ ವಿಶ್ವ 'ನಿನ್ನ ಕವನ ತೊಗೊಂಡಿದೀ ತಾನೆ?' ಅಂತ ಕೇಳುವುದನ್ನು ಮರೆಯಲಿಲ್ಲ. 'ಅಯ್ಯೋ, ನನ್ನ ಮರೆವಿಗಿಷ್ಟು. ಅದನ್ನ ಆ ಡ್ರೆಸ್ಸಿಂಗ್ ಟೇಬಲ್ ಮೇಲೇ ಇಟ್ಟಿದೀನಿ. ಪ್ಲೀಸ್ ಸ್ವಲ್ಪ ತಂದ್ಕೊಡ್ತೀರಾ? ಮತ್ತೆ ಚಪ್ಪಲಿ ಬೆಲ್ಟ್ ತೆಗ್ಯಕ್ಕೆ ಕಷ್ಟ' ಎಂದ್ಳು. 'ನೋಡಿದ್ಯಾ, ನೋಡಿದ್ಯಾ. ಸಮಯಕ್ಕೆ ಸರ್‍ಯಾಗಿ ಜ್ಞಾಪಕ ಮಾಡ್ದೆ. ಥ್ಯಾಂಕ್ಸ್ ಹೇಳು ಮತ್ತೆ' ಎನ್ನುತ್ತಾ ರೂಮಿಂದ ಅವಳ ಮೊದಲ ಕವನದ ಪ್ರತಿ ತಂದು ಕೈಗಿತ್ತ. ಆತುರಾತುರವಾಗಿ ಅದನ್ನ ವ್ಯಾನಿಟಿ ಬ್ಯಾಗ್ ಒಳ್ಗೆ ಹಾಕ್ಕೊಂಡ ನೀರಜ ಬೇಗ ಬೇಗ ಹೆಜ್ಜೆ ಹಾಕಿದ್ಳು.

ನೀರಜಾಳ ಮೊದಲ ಸಾಹಿತ್ಯ ಸಂಭ್ರಮದ ಅನುಭವ ಕೇಳಲು ಮನೆಯವರೆಲ್ಲಾ ಕಾತುರರಾಗಿದ್ದರು. ಎಂಟೂವರೆಗೆ ಬಂದ ನೀರಜಳ ಮುಖದಲ್ಲಿ ಸಂತೋಷವೇ ತುಂಬಿತ್ತು. ಸಣ್ಣಗೆ ಏನೋ ಹಾಡುತ್ತಲೇ ಪ್ರವೇಶವಾಯ್ತು. 'ರೀ........' ಎಂಬ ನಾದ ಅಲ್ಲಿಂದ್ಲೇ ಹರಿದು ಬಂತು. ನೀರಜಳ 'ರೀ' ರಾಗ ವಿಶ್ವನಿಗೆ ಬಹುಪ್ರಿಯ.

'ಏನು ಆಮ್ಮಾವ್ರು ಜಯಭೇರಿ ಬಾರ್‍ಸಿದ್ರೋ?' ಎಂದು ಕೇಳಿದ.

'ಹೂಂ. ರೀ. ಬಿಸಿಬಿಸಿ ಪಕೋಡ ತುಂಬಾ ಚೆನ್ನಾಗಿತ್ತು. ನಾನು ಹೇಳಿದ್ಮೇಲೇ ರೇಖನಿಗೆ ಪುದೀನಾ ಪಕೋಡ ಮಾಡಿಸ್ಬೇಕು ಅಂತ ಹೊಳೀತಂತೆ. ನಂಗೆ ಥ್ಯಾಂಕ್ಸ್ ಹೇಳಿದ್ಳು. ಅವರ ಮಗ ಒಳ್ಳೆ ಫೋಟೋಗ್ರಾಫರ್ ಕಣ್ರೀ. ನಮ್ಮ ಫೋಟೋಗಳನ್ನೆಲ್ಲಾ ತೆಗೆದು ಸಿಡಿ ಮಾಡಿ ಕೊಡ್ತಾನಂತೆ. ವಿಡಿಯೋ ಕೂಡ ಮಾಡ್ದಾ ರೀ.'.

'ನೀರಜ ಅದೆಲ್ಲಾ ಇರ್ಲಿ. ನೀನು ಕವನ ಚೆನ್ನಾಗಿ ಓದ್ಯಾ? ಅದರ ಬಗ್ಗೆ ಎಲ್ರೂ ಏನು ಹೇಳಿದ್ರು. ಅದ್ನ ಮೊದ್ಲು ಹೇಳು.'

'ಅಯ್ಯೋ ಹೇಳ್ತೀನಿ. ಸ್ವಲ್ಪ ಇರಿ. ಸಂದೀಪ್ ನಿಂಗೆ ತುಂಬಾ ಥ್ಯಾಂಕ್ಸ್ ಕಣೋ. ನೀನು ದೀಪಾವಳಿಗೆ ತೆಗ್ಸಿಕೊಟ್ಯಲ್ಲಾ ಸೀರೆ, ಅದ್ರ ಡಿಸೈನ್ ಎಲ್ರಿಗೂ ಇಷ್ಟ ಆಯ್ತು. ಯಾವ ಅಂಗ್ಡೀದು ಅಂತ ಕೇಳಿದ್ದೂ ಕೇಳಿದ್ದೆ. ನಿಖಿತಾ ನೀನು ಸೆಲೆಕ್ಟ್ ಮಾಡ್ಕೊಟ್ಟ ಮುತ್ತು-ಹವಳದ ನೆಕ್ಲೆಸ್ ಮತ್ತು ಓಲೇನ ಎಲ್ರೂ ಕಣ್ಣು ಬಾಯಿ ಅಗಲಿಸಿ ನೋಡಿದ್ರು. ನನ್ನ ಸೊಸೆ ಸೆಲೆಕ್ಷನ್ ಅಂತ ಎಲ್ರಿಗೂ ಹೇಳ್ದೆ. ಎಲ್ರೂ ನಿಮ್ಮ ಸೊಸೇಗೇ ಒಳ್ಳೆ ಟೇಸ್ಟ್ ಇದೆ ಅಂತ ಮೆಚ್ಕೊಂಡ್ರು.'

'ರೀ ಮೇಡಂ. ಓಹ್ ಅಲ್ಲಲ್ಲ ಸಾಹಿತಿಗಳೇ ನಿಮ್ಮ ಕವನದ ಬಗ್ಗೆ ಸ್ವಲ್ಪ ಹೇಳ್ರೀ. ನಿಮ್ಮ ಅಭಿಮಾನಿ ಕಾತುರನಾಗಿ ಕಾಯ್ತಾ ಇದ್ದಾನೆ' ಅಂತ ವಿಶ್ವ ಅವಳ್ನ ಟ್ರಾಕ್‌ಗೆ ಎಳೆಯೋ ಪ್ರಯತ್ನ ಮಾಡ್ದ ಮತ್ತೊಂದು ಸಾರಿ.

'ಹಾಂ. ಹೇಳ್ತೀನಿ ಕೇಳಿ. ಎಲ್ರೂ ಸೇರಿದ ಮೇಲೆ ಮೊದ್ಲು ಯಾರು ಅಂತ ಚರ್ಚೆ ಆಯ್ತು. ಅದಕ್ಕೆ, ಸಹನ ಚೀಟಿಗಳಲ್ಲಿ ನಂಬರ್‌ಗಳ್ನ ಬರ್‍ದು ಹಾಕೋಣ. ಯಾರಿಗೆ ಯಾವ ನಂಬರ್ ಬರತ್ತೋ ಅದ್ರ ಪ್ರಕಾರ ಓದೋಣ' ಅಂತ ಹೇಳಿದ್ಳು. ಎಲ್ರೂ ಒಪ್ಪಿದ್ದೇ ತಡ, ಅವ್ಳೇ ತನ್ನ ಪರ್ಸಿನಿಂದ ಒಂದು ಹಾಳೆ ತೆಗ್ದು

ನಂಬರ್‌ಗಳನ್ನ ಬರೆದ್ಳು. ಅವುಗಳ್ನ ಮಡಚಿ ಹಾಕೋವಾಗ ನೋಡಿದ್ರೆ ಅವಳು ಬರೆದ ಕವನದ ಹಾಳೇನೇ ಹರಿದು ಬಿಟ್ಟಿದಾಳೇ! ಅವಳ ಮುಖ ಇಂಗು ತಿಂದ ಮಂಗನ ಮುಖದಂತೆ ಕೆಟ್ಹೋಯ್ತು.'

'ಅಯ್ಯೋ ಪಾಪ. ಆಮೇಲೇನು ಮಾಡಿದ್ರೂ?' ಎಂಬ ನಿಖಿತಾಳ ಪ್ರಶ್ನೆಗೆ ಮಾಡೋದೇನು ಅವಳ ನಂಬರ್ ಬಂದಾಗ ಕೈ ಅಲ್ಲಾಡಿಸಿ ಕುಳಿತ್ಳು.' ಅಂತ ಹೇಳಿದ ನೀರಜ ನಿಟ್ಟುಸಿರೆಳೆದಳು.

'ಅಯ್ಯೋ ಪಾಪ. ಅದ್ಸರಿ ಮಾರಾಯ್ತಿ ನಿನ್ನ ಕವನ ವಾಚನ ಸರ್‍ಯಾಗಿ ಬಂತಾ?' ವಿಶ್ವನ ಕುತೂಹಲ ಮತ್ತಷ್ಟು ಹೆಚ್ಚಾಯ್ತು.

'ರೀ...., ಆ ಅಲಮೇಲೂಗೆ ಕನ್ನಡ ಬರ್‍ಯಕ್ಕೇ ಬರಲ್ವಂತೆ. ಆದ್ರೂ ತಮಿಳು ಲಿಪಿಯಲ್ಲೇ ಕನ್ನಡ ಕವನ ಬರ್ದು ರಾಗವಾಗಿ ಹಾಡಿದ್ಳು. ಮದುವೆ ಅದ್ಮೇಲೆ ಕನ್ನಡ ಮಾತಾಡ್ತಾ, ಮಾತಾಡ್ತಾ ಕಲಿತ್ಳಂತೆ. ಒಳ್ಳೆ ಗಟ್ಟಿಗಿತ್ತಿ ಕಣ್ರಿ. ಕವನ ಹೇಗೇ ಇರ್ಲಿ. ಅವಳು ಸುಶ್ರಾವ್ಯವಾಗಿ ಹಾಡಿಯೇ ಎಲ್ಲರ ಚಪ್ಪಾಳೆ ಗಿಟ್ಟಿಸಿಬಿಟ್ಳು'

'ಎರಡ್ನೇ ವಿಕೆಟ್ ಬಿತ್ತು ಮಾರಾಯ್ತಿ. ನಿನ್ನ ಕವನ....' ವಿಶ್ವನ ವಿಶ್ವಪ್ರಯತ್ನ ಮತ್ತೊಂದು ಸಾರಿ. ಅದನ್ನು ಗಮನಿಸಿಯೂ ಗಮನಸಿದವಳಂತೆ ನೀರಜನ ಪುರಾಣ ಮುಂದೆ ಸಾಗಿತು.

'ಪಾಪ. ಆ ಬಂಗಾಳಿ ಅರ್ಪಣಾ ಚಟರ್ಜಿಗೆ ಇವತ್ತು ಬೋರ್ ಆಗ್ಹೋಯ್ತು ಕಣ್ರೀ. ಅವ್ಳಿಗೆ ಸ್ವಲ್ಪಾನೂ ಕನ್ನಡ ಅರ್ಥ ಆಗಲ್ಲ. ಪ್ರತಿ ಸಾರಿ ನಮ್ಮ ಕೋಲ್ಕಟಾ, ರವೀಂದ್ರ ಸಂಗೀತ, ಬಂಗಾಳಿ ಸ್ವೀಟ್ಸ್ ಅಂತ ಎಷ್ಟೊಂದು ಮಾತಾಡೋವ್ಳು ಇವತ್ತು ಬಾಯಿಗೆ ಬೀಗ ಜಡದಂತೆ ತೆಪ್ಪಗೆ ಕೂತಿದ್ಳು. ಕವನಾನೂ ಇಲ್ಲ; ಕಾವ್ಯಾನೂ ಇಲ್ಲ. ಆದ್ರೆ ಅವ್ಳಿಗೆ ಬಿಸಿಬಿಸಿ ಪಕೋಡ ತುಂಬಾ ಇಷ್ಟ ಆಯ್ತು. ಸದ್ದಿಲ್ಲದೆ ಸಾಕಷ್ಟು ಗುಳುಂ ಮಾಡಿದ್ಳು. ಅದನ್ನ ಮಾಡೋದು ಹೇಗೆ ಅಂತ ಪಕ್ಕದ್ಲಲಿದ್ದ ರೇಖಾನ ಕೇಳ್ಕೊಂಡ್ಳು.' ವಿಶ್ವನ ತಾಳ್ಮೆ ಮೀರಿ ಹೋಯ್ತು.

'ಲೇ ನೀರಜ ನಿನ್ನ ಕವನದ ಕಥೆ ಈಗ ಹೇಳ್ದೇ ಇದ್ರೆ ನಾನು ಇಲ್ಲಿಂದ ಎದ್ದು ಹೋಗ್ತೀನಿ' ಅಂತ ಧಮ್ಕೀ ಹಾಕ್ದ.

'ರೀ. ನೀವು ಡ್ರೆಸ್ಸಿಂಗ್ ಟೇಬಲ್ ಮೇಲಿಂದ ತಂದುಕೊಟ್ಟ ಹಾಳೆ ನನ್ನ ಮೆಡಿಕಲ್ ರಿಪೋರ್ಟ್. ಅದರ ಪಕ್ಕದಲ್ಲಿ ನಾನು ಬರೆದ ಕವನದ ಹಾಳೆ ಇತ್ತು. ನನ್ನ ಸರದಿ ಬಂದಾಗ ಓದೋಕ್ಕೆ ತೆಗ್ದಾಗ...........' ಆಗ ವಿಶ್ವನಿಗೆ ತನ್ನ ಮೇಲೆ, ನೀರಜನ ಮೇಲೆ ಅಗಾಧವಾದ ಕೋಪ ಬಂತು. 'ಅಯ್ಯೋ ದೇವ್ರೇ' ಅಂದ. ಆದ್ರೆ ನೀರಜನಿಗೆ ಅದರ ಪರಿವೆಯೇ ಇಲ್ಲ. ಸಲೀಸಾಗಿ ತನ್ನ ಗಂಡನ ಮೇಲೆ ತಪ್ಪು ಹೊರ್ಸಿ, ತಾನು ಜಾರಿಕೊಂಡ್ಳು. ಅವಳಿಗಂತೂ ಸಾಹಿತ್ಯ ಸಂಭ್ರಮದಲ್ಲಿ ಏನೂ ಕೊರತೆಯಾಗಿರಲಿಲ್ಲ.

# ವಾಡಿಕೆಗಳ ಸುಳಿಯಲ್ಲಿ

– ಕುಮುದಾ ಪುರುಷೋತ್ತಮ್

ಲಕ್ಷ್ಮಿ:– ಬಂದ್ರಾ?

ನಾಗತ್ತೆ:– ಇಲ್ಲಾ! ಇನ್ನೂ ಊರಲ್ಲೇ ಇದೇನೆ. ಇದೇನು ಜಾಣತನದ ಪ್ರಶ್ನೆಯೋ? ಊರುಬಿಟ್ಟು ಊರಿಗೆ ಬಂದು ಎದ್ರುಗೆ ನಿಂತಿರೋವ್ರನ್ನ ನೋಡಿ ಬಂದ್ರಾ ಅಂದ್ರೆ ಬುದ್ಧಿ ಮಂದಾನೋ ಇಲ್ಲ ದೃಷ್ಟಿ ಮಂದಾನೋ?

ಇದು ಕೈಲಾಸಂ ರವರ ಪಾತು ತೌರ್ಮನೆ ಪ್ರಹಸನದಿಂದ ಆಯ್ದ ತುಣುಕು. ನಾಗತ್ತೆ ಇದ್ದುದನ್ನು ಇದ್ದಂತೆ ಹೇಳುವ ಬಂಗಾರದ ಮನಸ್ಸಿನ ನಿಷ್ಠುರವಾದಿ ಹೆಂಗಸು. ಬೀಗಿತ್ತಿ ಲಕ್ಷ್ಮಿ ಮನೆಗೆ ಬಂದವರನ್ನು ಸ್ವಾಗತಿಸುವ ಈಪರಿ ಕಂಡು ನಾಗತ್ತೆ ಸಿಡಿದು ಬೀಳುತ್ತಾಳೆ.

ನಾವು ನೀವು ಹಾಗೆ ಸಿಡಿದು ಬೀಳಲು ಸಾಧ್ಯವೇ? ನನಗಂತಹ ಸಂದರ್ಭ ಎದುರಾದಾಗ ತಲೆಯಾಡಿಸಿ ಹೀ...ಹೀ... ನಗುತ್ತಾ ಒಳಗಡಿ ಇಟ್ಟುಬಿಡುತ್ತೇನೆ.

ಎದುರಿಗೆ ಬಂದು ನಿಂತವರನ್ನು 'ಬಂದ್ರಾ'ಎಂದು ಪ್ರಶ್ನಿಸುವುದು ತರ್ಕಕ್ಕೆ ನಿಲುಕದ್ದು. ಇದೇ ರೀತಿ ನಾವಾಡುವ ದೈನಂದಿನ ವಾಡಿಕೆ ಮಾತುಗಳಲ್ಲಿ ತರ್ಕಕ್ಕೆ ನಿಲುಕದ್ದು, ಪ್ರಯೋಜನಕ್ಕೆ ಬಾರದವು, ಪೇಚಿಗೆ ಸಿಲುಕಿಸುವಂಥದ್ದು ಎಷ್ಟೋ ಇವೆ. ಅವುಗಳಲ್ಲಿ ಕೆಲವನ್ನು ಹೆಕ್ಕಿ ಸಂದರ್ಭಾನುಸಾರ ನಿಮ್ಮ ಮುಂದಿಡುವುದು ಈ ಲೇಖನದ ಉದ್ದೇಶ್ಯ.

***

ನಮ್ಮಲ್ಲಿ ಪರಿಚಿತರನ್ನು ಕಂಡಾಗ ಸ್ವಾಗತಿಸುವ ಮತ್ತೊಂದು ವಿಧ ಆರೋಗ್ಯವೇ/ಕುಶಲವೇ/ಕ್ಷೇಮವೇ ಇತ್ಯಾದಿಯಾಗಿ ಕೇಳುವುದರ ಮೂಲಕ. ಇದನ್ನು ಕೇಳಿದೊಡನೆ ಕರಾರುವಾಕ್ಕಾಗಿ ಅರ್ಥೈಸಿಕೊಂಡು ಅನಾರೋಗ್ಯದ ಸರಮಾಲೆ ಮುಂದಿನ ಅರ್ಧ ಗಂಟೆ ಬಿಚ್ಚಿದರೆ ಕೇಳಿದವರ ಗತಿ? ನನಗೊಮ್ಮೆ ಅದೇ ಗತಿಯಾಯಿತು.

ಬಹಳ ದಿನಗಳ ಬಳಿಕ ಸ್ವಲ್ಪ ಗಾಬರಿ ಸ್ವಭಾವದ ಬಂಧು ಒಬ್ಬರನ್ನು ವಾಡಿಕೆಯಂತೆ ಆರೋಗ್ಯವೇ ಎಂದು ಕೇಳಿ ತಕ್ಷಣ ನಾಲಿಗೆ ಕಚ್ಚಿಕೊಂಡೆ. ಆದರೆ ತಪ್ಪಾಗಲೇ ಘಟಿಸಿಹೋಗಿತ್ತು. "ಆರೋಗ್ಯ ಕೇಳ್ತೀರಾ? ನಾಲ್ಕು ತಿಂಗ್ಳಿಂದ ನನ್ನ ಪಾಡು ಬೀದಿನಾಯಿ ಪಾಡಾಗಿದೆ. ನೆಗಡಿ ಅಂಬೋ ಬೇತಾಳ ಆವರಿಸ್ಕೊಂಡ್ತು. ಐದು ನಿಮಿಷದಲ್ಲಿ ಐವತ್ತುಬಾರಿ ಸೀನು ಬಂದು ಅಲ್ಲಾಡಿಹೋದೆ! ಮೂಗ್ನಿಂದ ಒಂದೇ ಸಮ ಅತಿವೃಷ್ಟಿ. ಇಂಥದಕ್ಕೆಲ್ಲಾ ಸಾಮಾನ್ಯ ಕುಟುಂಬ ವೈದ್ಯರು ಸಲ್ಲ ಅಂತ ಕಿವಿ ಮೂಗು ಗಂಟಲು ತಜ್ಞರ ಬಳಿಯೇ ಹೋದೆ. ಪರೀಕ್ಷೆ ಮಾಡಿ ಹೇಗೂ ಇರ್ಲಿ ಒಂದು ಎಕ್ಸ್ ರೇ

ತೆಗೆಸಿಬಿಡಿ ಎಂದು ತಾವೇ ನಡೆಸುತ್ತಿದ್ದ ಎಕ್ಸ್‌ರೇ ಸೆಂಟರ್‌ಗೆ ಕಳ್ಸಿದ್ರು. ಫೋಟೋ ನೋಡಿ ಏನು ತೊಂದ್ರೆ ಇಲ್ಲ ಅಂತ ನಾಲ್ಕೈದು ಮಾತ್ರೆ ಬರೆದು ಕೊಟ್ರು. ಮಾರನೇ ದಿನವೇ ಹೊಟ್ಟೆ ಕೆಟ್ಟು ದಿನವೆಲ್ಲಾ ಬರೀ ಟಾಯ್ಲೆಟ್ಟಿಗೆ ಎಡ ತಾಕೋದೇ ಆಗಿ ದೇಹದ ನೀರೆಲ್ಲಾ ಬಸಿದುಹೋಗಿ ಆಸ್ಪತ್ರೆ ಸೇರಿದೆ.

ಅಲ್ಲಿ ಹೊಟ್ಟೆ ತಜ್ಞರು ಏನೇನೋ ಟೆಸ್ಟುಗಳು ಮಾಡ್ಸಿ ಮತ್ತೆ ಮಾತ್ರೆಗಳು ಬರೆದು ಕೊಟ್ರು. ಮೈಯೆಲ್ಲಾ ನವೆ ಕೆಂಪು ಕೆಂಪು ದದ್ದು. ನಮ್ಮಜ್ಜಿ ನೋಡಿ ನಾಹೇಳ್ತಾನೇ ಬಂದಿದೀನಿ ನಿಂಗಿನ್ನೂ ಬುದ್ಧಿ ಬಲಿತಿಲ್ಲಾಂತ. ಇವತ್ತು ಪ್ರಮಾಣ್ವಾಯ್ತು. ಮಕ್ಕಳೀ ಬರೋ ಧಡಾರ ಬಂದಿದೆ ಅಂದ್ರು. ನೀವೇ ಹೇಳಿ ಮಕ್ಕಳಿಗೆ ಬರೋ ಖಾಯ್ಲೆ ದೊಡ್ಡವರಿಗೆ ಬಂದ್ರೆ ಗಾಬರಿ ಆಗೋಲ್ವೇ? ಮಕ್ಕಳ ತಜ್ಞರ ಬಳಿ ಹೋದೆ. ಒಂದೆರಡು ಸಿರಪ್ ಬರೆದು ಕೊಟ್ರು. ಕುಂಭಕರ್ಣನ ಆವಾಹನೆ ಆದಂತೆ ನಿದ್ದೆ ಅಂತಂದ್ರೆ ನಿದ್ದೆ ಇಪ್ಪತ್ತು ನಾಕು ಗಂಟೇನೂ. ನನ್ನ ಹೆಂಡ್ತಿ ಹೆದರಿಕೊಂಡು ಮೆದುಳು ತಜ್ಞರ ಬಳಿ ತೂಕಡಿಸುತ್ತಿದವನನ್ನು ಎಳ್ಕೊಂಡು ಹೋದ್ಲು. ಈಗ ಎಮ್ ಆರ್ ಐ ಸ್ಕ್ಯಾನ್ ಮಾಡ್ಬೇಕು ಅಂತ ಬರ್ಕೊಟ್ಟಿದಾರೆ.ಇದುವರ್ಗೂ ಮುವತ್ತು ಸಾವಿರ ಖರ್ಚಾಗಿದೆ. ಇದಕ್ಕೆ ಇನ್ನೆಷ್ಟು ಖರ್ಚಾಗತ್ತೊ" ಎಂದು ಗೋಳಾಡಿದರು.

"ನಿಮ್ಮ ಅನಾರೋಗ್ಯಕ್ಕೆ ಮೂಲಭೂತವಾದ ನೆಗಡಿ ಹೇಗಿದೆ?"

"ನೀವು ಕೇಳಿದ್ಮೇಲೆ ಅದರ ನೆನಪಾಯ್ತು ನೋಡಿ. ಈಗ ನೆಗಡಿ ಮಾಯವಾಗಿದೆ" ಎಂದರು ವಿಸ್ಮಯದಿಂದ.

ಈಗೆಲ್ಲಾ ನಾನು ಅಪ್ಪಿತಪ್ಪಿಯೂ ಆ..ರೋ..ಗ್ಯ ಅನ್ನೊ ಪದವನ್ನು ಯಾರಮುಂದೆಯೂ ಉಚ್ಚರಿಸೋದಿಲ್ಲ.

ಪರಿಚಿತರನ್ನು ಕಂಡಾಗ ಉಭಯಕುಶಲೋಪರಿ ನಡೆಸಿ ವಿದಾಯಹೇಳುವಮುನ್ನ ಮತ್ತೊಂದು ವಾಡಿಕೆಯ ಮಾತು 'ಮನೇಗ್ಬನ್ನಿ'.

ಹೀಗೆ ನಾನೆಷ್ಟೋ ಬಾರಿ ಆಹ್ವಾನಿಸಿಕೊಂಡಿದ್ದೇನೆ. ಒಮ್ಮೆಯಂತೂ "ನಾನೆಷ್ಟು ಬಾರಿ ಕರೆದಿದ್ದೇನೆ. ನೀನು ಬರೋದೇ ಇಲ್ಲ. ನಿಂಗೆ ಜಂಬ " ಎಂದು ಬೈಯಿಸಿಕೊಂಡಿದ್ದೇನೆ. ಪಾಪ ಇಷ್ಟೊಂದು ವಿಶ್ವಾಸದಿಂದ ಕರೀತಿದಾಳೆ. ಹೋಗಿ ಬರೋಣ ಎಂದುಕೊಂಡು ಯಾವಾಗ ಬರ್ಲಿ ಎಂದೆ."

ಯಾವಾಗ ಬೇಕಾದ್ರೂ ಬಾ. ನಾನು ಮನೆ ಬಿಟ್ಟು ಎಲ್ಲೂ ಹೋಗೋದೇ ಇಲ್ಲ. ಗೂಟ ಬಡ್ಕೊಂಡು ಮನೇಲೇ ಇರ್ತೇನೆ ಎಂಬ ಆಶ್ವಾಸನೆ ದೊರೆಯಿತು. ಒಂದು ವಾರದ ಬಳಿಕ ಅವರ ಮನೆಗೆ ಹೋದೆ. ಬಾಗಿಲಿಗೆ ಹಾಕಿದ್ದ ಬೀಗ ಅಣಕಿಸಿ ನಗೆಯಾಡಿತು. ಪಾಪ ಏನು ಅನಿವಾರ್ಯವಾಯಿತೊ ಎಂದುಕೊಂಡು ಮತ್ತೊಂದುದಿನ ಹೋದೆ. ತಡವಾಗಿ ಬಂದು ಬಾಗಿಲು ತೆರೆದಳು. ಮೂಗಿಯಂತೆ ಒಳ ಬರುವಂತೆ ಸೂಚಿಸಿ ಕುರ್ಚಿ ತೋರಿಸ್ಸಿ ಕೂಡಲು ಸಂಜ್ಞೆ ಮಾಡಿದಳು. ರೌದ್ರ, ಭಯ, ಬೀಭತ್ಸಗಳ ರಸಪಾಕದ

ಧಾರಾವಾಹಿಯನ್ನು ಮನೆಮಂದಿಯೆಲ್ಲಾ ತನ್ಮಯತೆಯಿಂದ ನೋಡುತ್ತಿದ್ದರು. ಮುಖ್ಯ ಭೂಮಿಕೆಯಲ್ಲಿ ಬುಸುಗುಟ್ಟುವ ಹಾವುಗಳು, ಎತ್ತರದ ಧ್ವನಿಯಲ್ಲಿ ಹೂಂಕರಿಸುತ್ತಾ ಬೆದರಿಸುವ ಬೈರಾಗಿ, ಪ್ರತೀಕಾರದ ಹಠತೊಟ್ಟು ಸದಾ ಪಿತೂರಿ ಮಾಡುತ್ತಲೇ ಇರುವ ರಕ್ಕಸಿಯರು, ಲೀಟರ್ಗಳಷ್ಟು ಕಣ್ಣೀರು ಸುರಿಸುವ ಮುಗ್ಧ(ಪೆದ್ದು!) ಯುವತಿ ಇವರದೆಲ್ಲಾ ಪೋಷಕ ಪಾತ್ರಗಳು. ನೋಡುತ್ತಿರುವವರ ರಸಭಂಗ ಮಾಡಲಿಚ್ಛಿಸದೆ ಸಜೆ ಅನುಭವಿಸುತ್ತಾ ಸೀರಿಯಲ್ ಮುಗಿದೊಡನೆ ಮೇಲೆದ್ದೆ. " ಹಾಗ್ಬಂದು ಹೀಗೆ ಹೋಗ್ತಿದ್ದೀಯ. ಕಾಫಿ ಟೀ ಏನೂ ತೊಗೋಳ್ಳಲೇ ಇಲ್ಲ" ಎಂದು ಔಪಚಾರಿಕವಾಗಿ ಉಪಚರಿಸಿ ಬೀಳ್ಕೊಟ್ಟಳು! ಅಂದಿನಿಂದ ಕಾರ್ಯಕಾರಣವಿಲ್ದಿದ್ರೆ ಯಾರ ಮನೇಗೂ ಕಾಲಿಡೋದೇ ಇಲ್ಲ. ಯಾರಾದ್ರೂ ಮನೇಗೆ ಬನ್ನಿ ಅಂತಂದ್ರೆ ನಾನೂ ಅಷ್ಟೇ ವಿಶ್ವಾಸದಿಂದ " ನೀವೂ ಬನ್ನಿ" ಎಂದು ಆಹ್ವಾನಿಸಿ ಮುಂದಡಿಯಿಡುತ್ತೇನೆ.

"ಇವತ್ತು ಏನಡ್ಗೆ? " ಇದು ಹಳೆಯ ತಲೆಮಾರಿನ ಗೃಹಿಣಿಯರು ಒಂದೆಡೆ ಕಲೆತಾಗ ಕೇಳುತ್ತಿದ್ದ ಮೊದಲ ಪ್ರಶ್ನೆ.

(ಇಂದಿನ ಗೃಹಿಣಿಯರು ಹೇಳಿಕೊಳ್ಳುವಂತಹ ಅಡುಗೆ ಮಾಡಿದ್ರೆ ತಾನೆ ಈ ಪ್ರಶ್ನೆ ಕೇಳಲು? ಈಗೆಲ್ಲಾ ಫಾಸ್ಟ್ ಫುಡ್, ಬ್ರೆಡ್ಜುಜ್ಯಾಮು,ಓಟ್ಸು, ಪೀಜ್ಜಾ,ಬರ್ಗರ್ ಯುಗ. ಹೀಗಿರುವಾಗ ಕೇಳಲು ಹೇಳಲು ಏನಾದರೂ ಉಳಿದಿದ್ದರೆ ತಾನೇ?) ಸಂಭಾಷಣೆ ಅಲ್ಲಿಂದ ಆರಂಭ ಗೊಂಡು ಇನ್ನೆಲ್ಲೆಲ್ಲೋ ಹೊರಡುತ್ತಿತ್ತು. ಇಂತಹ ಪ್ರಶ್ನೆ ನನಗೆದುರಾದಾಗ ನಾನಂದುಕೊಳ್ಳುತ್ತಿದ್ದುದು ನಮ್ಮಮನೆ ಅಡುಗೆ ತಿಳಿದು ಇವರೇನು ಮಾಡುವರು? ಹೆಚ್ಚೆಂದರೆ ಬಾಯಲ್ಲಿ ನೀರೂರಬಹುದೇ ಹೊರತು ಹೊಟ್ಟೆಯಂತೂ ತುಂಬುವುದಿಲ್ಲವಲ್ಲಾ? ಇದೊಂದು ವ್ಯರ್ಥಾಲಾಪ ಎನಿಸುತ್ತಿತ್ತು. ಆದರೂ ವಾಡಿಕೆಯ ಮಾತುಗಳು ಪಳೆಯುಳಿಕೆಗಳಂತೆ ಹಾಗೆಯೇ ಉಳಿದು ಬಿಟ್ಟಿವೆ. ಒಮ್ಮೆ ಸೋದರತ್ತೆಯೊಡನೆ ಹರಟೆ ಹೊಡೆಯಲು ಪಕ್ಕದಮನೆಯಾಕೆ ಬಂದಿದ್ದರು. ವಾಡಿಕೆಯಂತೆ ಮಾತು ಏನಡ್ಗೆ ಯೊಂದಿಗೆ ಆರಂಭವಾಯ್ತು. ಪಾಪ ಅತ್ತೆ ಅಲ್ಲೇ ಆಡುತ್ತಿದ್ದ ಆರು ವರ್ಷದ ಮಗಳನ್ನು ಗಮನಿಸಲಿಲ್ಲ." ಆಡುಗೆ ಕೇಳೀದ್ರ? ಹೆಚ್ಚೇನಿಲ್ಲ. ಅನ್ನ, ಬಟಾಣಿ ಕೂಟು, ಕೋಸಿನ ಪಲ್ಯ, ಸೊಪ್ಪಿನ ಮಜ್ಜಿಗೆ ಹುಳಿ, ತಿಳೀಸಾರು, ಹಪ್ಪಳ ಸಂಡಿಗೆ ಕರೆದಿದ್ದೆ." ಎಲ್ಲಮ್ಮಾ ಮಾಡ್ದೆ? ನನಗೆ ಬರೀ ಅನ್ನ ಸಾರು ಬಡಿಸ್ದೆ" ಎಂದು ಕೇಳಿದಮಗಳಿಗೆ ಬೆನ್ನುಮೇಲೆ ಒಮ್ಮೆ ಗುದ್ದಿ "ದೊಡ್ಡೋರ ಮಾತಿನಲ್ಲಿ ಮೂಗು ತೂರಿಸಬೇಡ ಅಂತ ಹೇಳಿಲ್ವೇ? ಹೊರಗ್ಹೋಗಿ ಆಟ ಆಡ್ಕೋ" ಎಂದು ಹೊರ ತಳ್ಳಿ ಮತ್ತೆ ಮಾತಿಗೆ ವಾಪಸ್ಸಾದರು. "ನಿಮ್ಮನೇಲಿ ಏನಡ್ಗೇ?" ಮಾತು ಮುಂದುವರೀತು.

***

ಈಗೆಲ್ಲಾ ಮದುವೆ ಮುಂಜಿ ಮುಂತಾದ ಸಮಾರಂಭ ಮಾಡುವವರಿಗೆ ಮುಂಚಿನಂತೆ ಹೆಚ್ಚಿನ ಶ್ರಮವಿಲ್ಲ.

ಎಲ್ಲದಕ್ಕೂ ಕಾಂಟ್ರಾಕ್ಟ್ ಕೊಟ್ಟುಬಿಟ್ಟರೆ ಮುಗೀತು. ಕೈಬೀಸಿಕೊಂಡು ಹೋಗಿ ಸಮಾರಂಭದ ಅಧ್ಯಕ್ಷತೆ ವಹಿಸಿಬಿಟ್ಟರೆ ಕರ್ತವ್ಯ ಮುಗಿದಂತೆ.ಕೊನೆಯಲ್ಲಿ ಊಟದವೇಳೆಯಲ್ಲಿ ಮಾತ್ರ ಟೇಬಲ್ಲುಗಳ ಮುಂದೆ ಒಂದು ಸುತ್ತು ಸುತ್ತಿಬಂದು "ನಿಧಾನಕ್ಕಾಗ್ಲಿ" ಎಂದು ಹಲ್ಕಿರಿಯುತ್ತಾ ಉಪಚರಿಸಿದರೆ ಸತ್ಕಾರದ ಉತ್ತುಂಗ ಏರಿದಂತೆ! ಇದನ್ನೇ ಗಂಭೀರವಾಗಿ ಪರಿಗಣಿಸಿ ನೀವೇನಾದರೂ ನಿಧಾನವಾಗಿ ಭುಜಿಸಿದರೋ ಮುಂದಿನ ಪಂಕ್ತಿಯಲ್ಲಿ ಊಟಕ್ಕಾಗಿ ಕಾದಿರುವವರು, ಬೇಗ ಬಡಿಸಿ ಮನೆಸೇರಲು ಕಾತುರರಾಗಿರುವ ಬಾಣಸಿಗರು, ಇದಕ್ಕೆ ಪೂರಕವಾಗಿ ನೇಪಥ್ಯದಲ್ಲಿ ಟೇಬಲ್ ಶುಧ್ಧಿಮಾಡಲು ಸೆರಗುಕಟ್ಟಿ ಕಸಪರಿಕೆ ಹಿಡಿದು ನಿಂತಿರುವ ಹೆಂಗಸರು ನಿಮ್ಮನ್ನೂ ಉಚ್ಚಿಷ್ಠದೊಂದಿಗೆ ಗುಡಿಸಿ ಕಸದ ಡಬ್ಬಿಗೆ ಹಾಕಿಬಿಟ್ಟಾರು!ವಾಡಿಕೆಯ ಮಾತುಗಳನ್ನತ್ತ ಒಗೆದು ಆಹಾರ ಬಾಯಿಗೆ ತುರುಕಿ ಅಗಿದೋ ಅಗಿಯದೆಯೋ ನುಂಗಿ ನೀರು ಕುಡಿದು ಜಾಗ ಖಾಲಿ ಮಾಡಿದರೆ ನಿಮಗೂ ಅವರಿಗೂ ಎಲ್ಲರಿಗೂ ಕ್ಷೇಮ ಹಾಗಾದರೆ ಇಂತಹ ವಾಡಿಕೆಯ ಮಾತುಗಳನ್ನು ಕಿತ್ತೊಗೆಯಬೇಕೇ? ಛೆ...ಛೆ... ಎಂಥ ಮಾತೂಂತ ಆಡ್ತೀರ?

ಒಗ್ಗರಣೆಗೆ ಹಾಕುವ ಹಸಿಮೆಣಸು, ಕರಿಬೇವು ಅಡುಗೆಯಿಂದ ಕಿತ್ತೊಗೆಯಲಾದೀತೇ? ಅದರ ಘಮಲು ಆಸ್ವಾದಿಸಿ ಉಳಿದದ್ದನ್ನು ಪಕ್ಕ ತಳ್ಳಿದರೆ ಆಯ್ತು. ಅರ್ಥವೋ ಅನರ್ಥವೋ ವಾಡಿಕೆಯ ಇಂತಹ ಮಾತುಗಳು ಸಂವಹನವನ್ನು ಶ್ರೀಮಂತಗೊಳಿಸಿರುವುದಂತೂ ಸತ್ಯ.

## ಉಪಚಾರ

ಮದುವೆ ಮನೆಯಲ್ಲಿ

ಸಾಲು ಸಾಲು ಭೋಜನ ಪ್ರಿಯರಲ್ಲಿ

ಕೈ ಮುಗಿದು ಮನವಿ

(ಗಟ್ಟಿಯಾಗಿ)

*ಸಾವಕಾಶವಾಗಿ ಭೋಜನ ಸಾಗಲಿ*

(ಮೆತ್ತಗೆ)

*ಮುಂದಿನ ಪಂಕ್ತಿಗೆ ಜನ ಕಾದಿದ್ದಾರೆ*

*ಎನ್ನುವುದು ನಿಮಗೆ ತಿಳಿದಿರಲಿ*

Published on 3rd of every month
Mailed on 5th of every month
Mailed at: Bangalore P.S.O. 560026

Registered - KA / BGW - 544 / 2018 - 2020
**RNI - KAR-KAN / 2005 / 15457**

Printed by: V.R. NATH for the Publihser KORAVANJI APARANJI TRUST, Published by KORAVANJI APARANJI TRUST, 36, 6th Main Road, Malleswaram, Bangalore - 560 003.Printed at: Ravi Graphics, 58/8, 2nd Main Road, Rajajinagar, Bangalore 560 010. Ph: 40889999/55 Editor : M. SHIVAKUMAR No. of Pages: 40+4 APARANJI KANNADA MONTHLY.